ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು

ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಏಪ್ರಿಲ್ 2024








APRIL 2024

## "ಆರ್ಬಿಟ್ ಸಂಸ್ಥೆಯಲ್ಲಿ ವಿಶ್ವ ಮಹಿಳಾ ದಿನಾಚರಣೆ"

ಹುಮ್ನಾಬಾದ್ ಪಟ್ಟಣದ ಆರ್ಬಿಟ್ ಸಂಸ್ಥೆಯಲ್ಲಿ ನವೆಂಬರ್ 23.2024 ವಿಶ್ವ ಮಹಿಳಾ ದಿನಾಚರಣೆಯನ್ನು ಅತಿ ವಿಜೃಂಭಣೆಯಿಂದ ಆಚರಣೆ ಮಾಡಲಾಯಿತು. ಮಹಿಳಾ ಅಭಿವೃದ್ಧಿ ಯೋಜನೆಯ ಸಂಯೋಜಕಿಯಾದ ಶ್ರೀಮತಿ ನಿರ್ಮಲ ಅವರು ಮಹಿಳೆಯು ತಾಯಿಯಾಗಿ, ಪತ್ನಿಯಾಗಿ, ಮಗಳಾಗಿ, ಸಹೋದರಿಯಾಗಿ ಅನೇಕ ಪಾತ್ರಗಳನ್ನು ಕುಟುಂಬದಲ್ಲಿ ನಿರ್ವಹಿಸುತ್ತಿದ್ದಾಳೆ ಎಂದು ಪ್ರಸ್ತವಿಕ ನುಡಿಗಳಲ್ಲಿ ಮಾತನಾಡಿದರು. ಗುಲ್ಬರ್ಗ ಧರ್ಮಕ್ಷೇತ್ರದ ಧರ್ಮಾದ್ಯಕ್ಷರಾದ ಅತಿ ವಂದನೀಯ ಪೂಜ್ಯ ರಾಬರ್ಟ್ ಮೈಕಲ್ ಮಿರಂದಾ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಮಹಿಳೆಯರು ಸಬಲರಾಗುವುದು ತುಂಬಾ ಅವಶ್ಯಕ, ಒಂದು ಕುಟುಂಬವೂ ಸಹ ಸಾಲದಲ್ಲಿ ಸಿಲುಕಬಾರದು ಎಂಬ ಉದ್ದೇಶದಿಂದ 30 ವರ್ಷಗಳ ಹಿಂದೆ ಸ್ವಸಹಾಯ ಗುಂಪುಗಳನ್ನು ರಚನೆ ಮಾಡಲಾಯಿತು. ಮಹಿಳೆಯರು ನಾಯಕತ್ವದ ಗುಣ ಬೆಳೆಸಿಕೊಳ್ಳಬೇಕು, ಪಂಚಾಯಿತಿಯ ಸದಸ್ಯರು ಹಾಗೂ ಅಧ್ಯಕ್ಷರು ಆಗುವಂತೆ ನಾಯಕತ್ವ ರೂಪಿಸಿಕೊಳ್ಳಬೇಕು ಎಂದು ಹೇಳಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾ. ವಿಕ್ಟರ್ ವಾಸ್ ಮಾತನಾಡಿ, ಇಂದಿನ ದಿನಗಳಲ್ಲಿ ಅನೇಕ ಮಹಿಳೆಯರು ಆರ್ಥಿಕವಾಗಿ ಸಬಲತೆ ಹೊಂದುತ್ತಿದ್ದಾರೆ. ಹಾಗೂ ಅನೇಕ ಕ್ಷೇತ್ರಗಳಲ್ಲಿ ಸಾಧನೆ ತೋರುತ್ತಿದ್ದಾರೆ, "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರದಂತೆ" ಎಂಬ ಆಶಯವನ್ನು ವ್ಯಕ್ತಪಡಿಸಿದರು. ಮಹಿಳೆಯರು ಮತದಾನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು, ಕಡ್ಡಾಯವಾಗಿ ತಮ್ಮ ಮತ ಚಲಾಯಿಸಬೇಕು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ 05 ಸಾಧಕ ಮಹಿಳೆಯರಿಗೆ ಸನ್ಮಾನಿಸಲಾಯಿತು. ಮಹಿಳೆಯರಿಂದ ಕೋಲಾಟ, ನೃತ್ಯ, ಶಾಲಾ ಮಕ್ಕಳಿಂದ ಭ್ರೂಣ ಹತ್ಯೆ ತಡೆಯುವ ಕಿರುನಾಟಕ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಮೆರಗು ನೀಡಿದರು, ಈ ಕಾರ್ಯಕ್ರಮದಲ್ಲಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮದ ರಾಜ್ಯ ಸಂಯೋಜಕಿಯಾದ ಶ್ರೀಮತಿ ಲೈನಾ, ಶ್ರೀಮತಿ ಭಾಗ್ಯಶ್ರೀ ಪಾಟೀಲ್, ಶ್ರೀಮತಿ ರೇಖಾ ಪಾಟೀಲ್, ಮಂಜುಳಾ ಪಂಚಾಳ ಬೀದರ್ ವಕೀಲರು, ಆಶಾ ಕಾರ್ಯಕರ್ತೆ ಮೇಲ್ವಿಚಾರಕಿ ಶ್ರೀಮತಿ ಲಕ್ಷ್ಮಿ ಹಾಗೂ ಸಂಘದ ಮಹಿಳೆಯರು ಸೇರಿದಂತೆ ಒಟ್ಟು 900ಕ್ಕು ಹೆಚ್ಚು ಜನರು ಭಾಗವಹಿಸಿ ಕಾರ್ಯಕ್ರಮ



ಪೂಜ್ಯ ರಾಬರ್ಟ್ ಮಿರಾಂದಾ
ಗುಲಬರ್ಗಾ ಧರ್ಮಾಧ್ಯಕ್ಷರು

ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ






orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

# "ಮಹಿಳಾಭಿವೃದ್ಧಿ ಕಾರ್ಯಕ್ರಮ"

## "ಆರ್ಬಿಟ್ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ"



ಚಿಟಗುಪ್ಪಾ ತಾಲೂಕಿನ ಶಾಮತಬಾದ್ ( ಹೋಸಳ್ಳಿ) ಗ್ರಾಮದಲ್ಲಿ ದಿನಾಂಕ 13.03.2024 ಎಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಗುಲ್ಬರ್ಗಾ ಹಾಗೂ ವೆಲ್ಮಗ್ನ ಆಸ್ಪತ್ರೆ ಬೀದರ್ ಇವರ ಸಂಯೋಗದೊಂದಿಗೆ ಉಚಿತ ಕ್ಯಾನ್ಸರ್ ತಪಾಸಣೆ ಶಿಬಿರ ಹಾಗೂ ಕಣ್ಣಿನ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಯಿತು. ಇಂಡಿಯನ್ ಕ್ಯಾನ್ಸರ್ ಸೊಸೈಟಿ ಪ್ರದೇಶಿಕ ಮುಖ್ಯಸ್ಥರಾದ ಶ್ರೀ ಗುರುರಾಜ ಕುಲಕರಣಿ ಮಾತನಾಡಿದರು. ಬೀಡಿ ಸಿಗ್ರೆಟ್ ಸೇದುವುದರಿಂದ, ಅತಿಯಾದ ರಾಸಾಯನಿಕ ಗೋಬ್ಬರ ಇರುವ ಆಹಾರ ಸೇವನೆ ಮಾಡುವುದರಿಂದ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ ಎಂದು ತಿಳಿಹೇಳಿದರು. ಕ್ಯಾನ್ಸರ್ ಬಂದರೆ ಭಯಪಡುವ ಅವಶ್ಯಕತೆಯಿಲ್ಲ. ಚಿಕಿತ್ಸೆ ಪಡೆಯುವುದರ ಜೊತೆಗೆ ಗುಣಮುಖರಾಗಬಹುದು ಎಂದು ಹೇಳಿದರು. ಹೀಗಾಗಿ ಶಬಿರದ ಸದುಪಯೋಗವನ್ನು ಪಡೆದುಕೊಂಡು ನಿಮ್ಮ ಆರೋಗ್ಯವನ್ನು ಪರಿಶೀಲಿಸಿಕೊಳ್ಳಿ ಎಂದು ತಿಳಿಸಿದರು. ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾ. ವಿಜಯ್‌ಕುಮಾರ ಮಾತನಾಡಿದರು. ಆರೋಗ್ಯವೆ ಭಾಗ್ಯ ಎಂಬಂತೆ ಆರ್ಬಿಟ್ ಸಂಸ್ಥೆಯು ಸುಮಾರು 30 ವರ್ಷಗಳಿಂದ ಜನರ ಸೇವೆಯಲ್ಲಿ ತೋಡಗಿ ಹಲವಾರು ಉಚಿತವಾಗಿ ಆರೋಗ್ಯ ಶಿಬಿರವನ್ನು ನಡೆಸುತ್ತ ಅನೇಕ ಜನರ ಬಾಳಿಗೆ ಬೆಳಕಾಗಿದೆ. ಶಿಬಿರದ ಸದುಪಯೋಗವನ್ನು ತಾವೆಲ್ಲರು ಪಡೆದುಕೊಂಡು ಒಳ್ಳೆಯ ಆರೋಗ್ಯವಂತರಾಗಿ ಬಾಳಿರಿ ಎಂದು ಹೊಗಳುಬ ಮೂಲಕ ಜನರ ಮನ ಮುಟ್ಟಿದರು. ಗ್ರಾಮ ಪಂಚಾಯತ್ ಕಾರ್ಯದರ್ಶಿ ನಂದಕುಮಾರ್, ಸದಸ್ಯರಾದ ಸುರ್ಯಕಾಂತ ವಾಗ್ದಳೆ, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿ.ಎಚ್.ಓ ಲತೀಫ್, ಹೆಚ್.ಸಿ.ಓ ಶ್ರೀಮತಿ ಕಸ್ತೂರಿಬಾಯಿ, ವೆಲ್ಮಗ್ನ ಆಸ್ಪತ್ರೆಯ ಶ್ರೀಮತಿ ಸುಮಾ, ಜೈವಂತ, ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆರಾದ ಶ್ರೀಮತಿ ಸಬೀತಾ, ಶ್ರೀಮತಿ ಅಮೀತಾ, ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಅರುಣಕೋಟೆ ಕಾರ್ಯಕರ್ತರಾದ ಶ್ರೀ ಹಣಮಂತ, ಆಶಾ ಕಾರ್ಯಕರ್ತೆಯರಾದ ಕವಿತಾ, ಜೈಶ್ರೀ, ಗ್ರಾಮದ ಮುಖಂಡರಾದ ಅಜಿಮೋದ್ದಿನ್, ಹಣಮಂತರಾವ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



## "ಲಿಂಗ ಸಮಾನತೆ ಮತ್ತು ನ್ಯಾಯ ಕುರಿತು ತರಬೇತಿ"



ಮಾರ್ಚ್ 06 2024 ರಂದು ಭಾತಂಬ್ರಾ ಗ್ರಾಮದಲ್ಲಿ ಲಿಂಗ ಸಮಾನತೆ ಮತ್ತು ನ್ಯಾಯ ಕುರಿತು ತರಬೇತಿಯನ್ನು ನಡೆಸಲಾಯಿತು ಐದು ಸಂಘಗಳಾದ ದಯಾಸಾಗರ, ಆಶ್ರಯ, ಕನಕದಾಸ, ಯಲಾಲಿಂಗ, ಯೋಜನೆಯ ಸದಸ್ಯರಿಗೂ ಹಾಗು ಸಂಘದ ಅಧ್ಯಕ್ಷರಿಗು ಲಿಂಗ ಸಮಾನತೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮಕ್ಕೆ ಮಹಿಳಾ ಸಬಲೀಕರಣ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ಅವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕುಟುಂಬದಲ್ಲಿ ಯಾವ ರೀತಿಯಾಗಿ ಮಹಿಳಾ ದೌರ್ಜನ್ಯ ಹಾಗೂ ಲಿಂಗ ತಾರತಮ್ಯ ನಡೆಯುತ್ತಿದೆ ಎಂಬುದಾಗಿ ಸಂಘದ ಸದಸ್ಯರಿಗೆ ವಿವರಿಸಲಾಯಿತು. ಮಹಿಳೆಯರಿಗಾಗಿ ಹಲವಾರು ಕಾನೂನುಗಳಿದ್ದರೂ ಲಿಂಗ ತಾರತಮ್ಯ ಇಂದಿಗೂ ನಿಂತಿಲ್ಲ, ಮಹಿಳೆಯರಿಗೆ ಕಾನೂನಿನ ಅರಿವು ಪಡೆಯುವಂತೆ ಸಲಹೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 30 ಜನ ಸಂಘದ ಸದಸ್ಯರು ಭಾಗವಹಿಸಿ ಕಾರ್ಯಕ್ರಮದ ಮಾಹಿತಿ ಹಾಗೂ ಸದುಪಯೋಗ ಪಡೆದುಕೊಂಡರು.

## "ತಿಪ್ಪೆ ಗೋಬ್ಬರವನ್ನು ಬಳಸಿಕೊಂಡು ಮನೆಯಲ್ಲಿಯೇ ಕೈತೋಟ"



ಶ್ರೀಮತಿ ನಂದಿನಿ ಇವರು ಚಿಟಗುಪ್ಪಾ ತಾಲೂಕಿನ ಬನ್ನಳಿ ಗ್ರಾಮದ ನಿವಾಸಿಯಾಗಿದ್ದಾರೆ. ಇವರು 2022 ರಲ್ಲಿ ಆರ್ಬಿಟ್ ಸಂಸ್ಥೆಯ ಮರಿಯ ಸಂಘದ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ. ಸಂಘಕ್ಕೆ ಸೇರಿಕೊಂಡ ನಂತರ ಇವರು ಹಲವಾರು ತರಬೇತಿ ಕಾರ್ಯಗಾರಗಳಲ್ಲಿ ಭಾಗವಹಿಸಿದರು. ಆರೋಗ್ಯದ ಕುರಿತ ತರಬೇತಿಯನ್ನು ಪಡೆದುಕೊಂಡು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ರಾಸಾಯನಿಕ ಗೋಬ್ಬರವನ್ನು ಸಿಂಪಡಿಸಿದ ಆಹಾರವನ್ನು ಸೇವನೆ ಮಾಡದೆ, ತಿಪ್ಪೆ ಗೋಬ್ಬರವನ್ನು ಬಳಸಿಕೊಂಡು ಮನೆಯಲ್ಲಿಯೇ ಕೈತೋಟವನ್ನು ನಿರ್ಮಿಸಿಕೊಂಡು ತರಕಾರಿಯನ್ನು ಬೆಳೆಸಿಕೊಂಡು ಆಹಾರ ಸೇವನೆ ಮಾಡುತಿದ್ದಾರೆ. ತಮ್ಮ ಉತ್ತಮವಾದ ಆರೋಗ್ಯವನ್ನು ಮನೆಯ ಕೈತೋಟದ ಆಹಾರದ ಮೂಲಕ ಕಾಪಾಡಿಕೊಳ್ಳುತ್ತಿದ್ದಾರೆ. ಇವರ ಈ ಪ್ರಯತ್ನವು ಸಮಾಜಕ್ಕೆ ಮಾದರಿಯಾಗಲು ಹಾಗೂ ಇವರ ಈ ಚಿಕ್ಕ ಪ್ರಯತ್ನವನ್ನು ಆರ್ಬಿಟ್ ಸಂಸ್ಥೆಯು ಪ್ರಶಂಸಿಸುತ್ತದೆ.

## “ರೈತ ಸಂಪರ್ಕ ಕೇಂದ್ರದಿಂದ ರೈತರಿಗೆ ಸ್ಪ್ರಿಂಕ್ಲರ್ ಪೈಪ್”



ಮಾರ್ಚ್ ತಿಂಗಳು; ನಿಂಬೂರ್ ಗ್ರಾಮದ ಶ್ರೀಮತಿ ಗೋದಾವರಿ ಅವರು ಆರ್ಬಿಟ್ ಸಂಸ್ಥೆಯ ನೇತೃತ್ವದಲ್ಲಿ ನಡೆಯುತಿರುವ ವಿಜಯಲಕ್ಷ್ಮಿ ಸ್ವ-ಸಹಾಯ ಸಂಘದ ಸದಸ್ಯಯಾಗಿರುತ್ತಾರೆ. ವಿಜಯಲಕ್ಷ್ಮಿಯವರು ಸಂಘಕ್ಕೆ ಸೇರಿಕೊಂಡು 12 ವರ್ಷಗಳಾಗಿವೆ. ಆರ್ಬಿಟ್ ಸಂಸ್ಥೆಯು ನೀಡಿರುವ ಮಹೀಳಾ ಸಬಲೀಕರಣ ಯೋಜನೆಯ ಅನೇಕ ತರಬೇತಿಗಳನ್ನು ಪಡೆದುಕೊಂಡಿರುತ್ತಾರೆ. ವಿವಿಧ ಇಲಾಖೆಗಳಿಗೆ ಭೇಟಿ ಮಾಡಿ ಎಲ್ಲ ಅಧಿಕಾರಿಗಳೊಂದಿಗೆ ಜಾಲಬಂಧವನ್ನು ಬೆಳೆಸಿಕೊಂಡಿರುತ್ತಾರೆ. ಕೃಷಿ ಕೆಲಸದಲ್ಲಿ ತಮ್ಮನ್ನು ತಾವೆ ತೊಡಗಿಸಿಕೊಂಡಿದ್ದಾರೆ. ರೈತ ಸಂಪರ್ಕ ಕೇಂದ್ರವನ್ನು ಭೇಟಿ ಮಾಡಿ ಉತ್ತಮ ಆರೋಗ್ಯ ಕಾಪಾಡಿಕೋಳ್ಳಲು ತಮ್ಮ ಹೋಲದಲ್ಲಿ ತರಕಾರಿಗಳನ್ನು ಬೆಳೆಸುವುದರಲ್ಲಿ ತೋಡಗಿರುತ್ತಾರೆ. ನೀರಾವರಿ ವ್ಯವಸ್ಥೆಯ ಸಲುವಾಗಿ ರೈತ ಸಂಪರ್ಕ ಕೇಂದ್ರದಕ್ಕೆ ಅರ್ಜೀಯನ್ನು ಸಲ್ಲಿಸಿದ್ದು, ನೀರಾವರಿ ವ್ಯವಸ್ಥೆಯ ಸಲುವಾಗಿ ಸರ್ಕಾರದಿಂದ ಸ್ಪ್ರಿಂಕ್ಲರ್ ಪೈಪ್, ನೌಜಲ್‌ಗಳನ್ನು ಪಡೆದುಕೊಂಡಿದ್ದಾರೆ. ಈ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಹಾಯ ಮಾಡಿದ ಆರ್ಬಿಟ್ ಸಂಸ್ಥೆಗೆ ಹಾಗೂ ಸಿಬ್ಬಂಧಿ ವರ್ಗದವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

## “ಸ್ಥಳೀಯ ಸಂಪನ್ಮೂಲ ಕ್ರೂಡೀಕರಣದ ಕುರಿತು ತರಬೇತಿ”



ಮಾರ್ಚ್ 7. 2024 ರಂದು ಬಂದೇನವಾಜ್ ಗ್ರಾಮದಲ್ಲಿ ಎರಡು ಸಂಘದ ಸದಸ್ಯರಿಗೆ ಸ್ಥಳೀಯ ಸಂಪನ್ಮೂಲ ಕ್ರೂಡೀಕರಣದ ಕುರಿತು ತರಬೇತಿ ನೀಡಲಾಯಿತು. ಸ್ಥಳೀಯ ಸಂಪನ್ಮೂಲ ಕ್ರೂಡೀಕರಣ ಎಂದರೆ, ನಮ್ಮ ಸಂಘದಲ್ಲಿ ಸ್ವಯಂ ಆಗಿ ನಮ್ಮಿಂದಲೇ ನಾವೇ ಸಹಾಯ ಮಾಡಿಕೊಳ್ಳುವುದು. ಉದ್ಯೋಗ ಅಥವ ಕೆಲಸದಲ್ಲಿ ಸರಿಯಾದ ಕೂಲಿ ಪಡೆದುಕೊಳ್ಳುವುದು, ಪಂಚಾಯಿತಿಯಿಂದ ಸಿಗುವಂತಹ ಸವಲತ್ತುಗಳಾದ ಮನೆಯಾಗಲಿ, ಶೌಚಾಲಯವಾಗಲಿ ಪಡೆದುಕೊಳ್ಳುವಂಥದ್ದು, ರೈತ ಸಂಪರ್ಕ ಕೇಂದ್ರಗಳಲ್ಲಿ ಸಿಗುವಂತಹ ಹಿಟ್ಟಿನ ಗಿರಣಿ, ಖಾರ ಕುಟ್ಟುವ ಯಂತ್ರ ಹಾಗೂ ಸರಕಾರದ ಹಲವು ಯೋಜನೆಗಳಿಂದ ಸಿಗುವಂತೆ ಸವಲತ್ತು ಹಾಗೂ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಮೂಲಕ ಸ್ವತಹ: ನಾವೇ ಸ್ವಉದ್ಯೋಗದಲ್ಲಿ ಯಾವ ರೀತಿಯಾಗಿ ಬೆಳೆಯಬೇಕು ಎಂದು ಸಮಗ್ರ ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ 22 ಜನ ಸದಸ್ಯರು ಭಾಗವಹಿಸಿ ತಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದುಕೊಂಡರು ಹಾಗೂ ಮಾಹಿತಿಯ ಸದುಪಯೋಗ ಪಡೆದುಕೊಂಡರು.

## ನವಜೀವನ ( ಎ.ಪಿ.ಎಫ್) ಕಾರ್ಯಕ್ರಮ”

## “ಮಾನಸಿಕ ಅಸ್ವಸ್ಥರ ಸಮೂದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮದ ಫಲಾನುಭವಿಗಳಿಗೆ ಆಪ್ತಸಮಾಲೋಚನೆಗೆ”



ಮಾರ್ಚ್ 21 2024 ರಂದು ಹುಮಾನಾಬಾದ ತಾಲೂಕಿನ ಹಿಲಾಲಪೂರ ಮತ್ತು ಭೋತಗಿ ಗ್ರಾಮಗಳಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜೀ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ನವಜೀವನ ಕಾರ್ಯಕ್ರಮದ ಆಪ್ತಸಮಾಲೋಚಕರಾದ ಶ್ರೀ ರವಿ.ಜಿ. ಅವರು ಮಾನಸಿಕ ಅಸ್ವಸ್ಥರ ಸಮೂದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮದ ಫಲಾನುಭವಿಗಳಿಗೆ ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತ್ತು. ಖಿನ್ನತೆಯ ಲಕ್ಷಣಗಳು ಕಂಡು ಬಂದಲ್ಲಿ ಇದು ಒಂದು ಮಾನಸಿಕ ಕಾಯಿಲೆಯೆಂದು ಪರಿಗಣಿಸಿ ಸೂಕ್ತ ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿದರು. ಈ ರಿತಿಯ ಮಾನಸಿಕ ಸಮಸ್ಯೆಗಳಿಂದನಮ್ಮ ಕುಟುಂಬದವರನ್ನು ಹೋರ ತರುವ ಜವ್ದಾರಿಯನ್ನು ಪೊಷಕರು ಹೋಂದಿರುತ್ತಾರೆ. ಎಂದು ಪೋಷಕರಿಗೆ ಮನವರಿಕೆ ಮಾಡಿ ಅವರಿಗೆ ಬೆಂಬಲ ನೀಡಲಾಯಿತ್ತು. ತಮ್ಮಲ್ಲಿ ಯಾರಿಗಾದರೂ ಯಾವುದಾದರೂ ಮಾನಸಿಕ ಕಾಯಿಲೆಯ ಲಕ್ಷಣಗಳು ಕಂಡುಬಂದಲ್ಲಿ ಆರ್ಬಿಟ್ ಸಂಸ್ಥೆಯ ಸಹಾಯವಾಣಿಗೆ ಕರೆ ಮಾಡಿ ಸಲಹೆ ಪಡೆಯುವಂತೆ ತಿಳಿಸಲಾಯಿತು.



## "ಮಾನಸಿಕ ಅಸ್ವಸ್ಥರ ಕುರಿತು ಕಾರ್ಯಕ್ರಮ"



ಮಾರ್ಚ್ 20 2024 ರಂದು ಹುಮ್ನಾಬಾದ್ ತಾಲೂಕಿನ ಬಸವಂತಪುರ ಗ್ರಾಮದ ಅಂಗನವಾಡಿಯಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶ್ರೀಮತಿ ಮಹದೇವಿ ಮತ್ತು ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ನಿರ್ಮಲ ಉಪಸ್ಥಿತರಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆ ಮಹಾದೇವಿ ಮಾಹಿತಿ ನೀಡುತಾ ಮಾನಸಿಕ ಕಾಯಿಲೆಯ ಲಕ್ಷಣಗಳು, ಕಾಯಿಲೆಗೆ ಸಂಭಂದಿಸಿದ ಕಾರಣಗಳ ಬಗ್ಗೆ ತಿಳಿಸಿದರು. ಮಾನಸಿಕ ಕಾಯಿಲೆಯಿಂದ ಬಳಲುತಿರುವವರು ಯಾರಾದರು ನಿಮ್ಮ ಊರಲಿ ಕಂಡುಬಂದರೆ ನಮ್ಮ ಸಂಪರ್ಕಕ್ಕೆ ತನ್ನಿ ನಾವು ಅವರಿಗೆ ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ತಜ್ಞ ಮನೋವೈದ್ಯರ ಉಚಿತ ತಪಸಣೆ ಮತ್ತು ಔಷಧಿಯನ್ನು ವದಗಿಸುವಲ್ಲಿನೆರವು ನೀಡುತ್ತೆವೆ ಎಂಬುದಾಗಿ ತಿಳಿಸಲಾಯಿತು. ನಿಮ್ಮ ಹಳ್ಳಿಗಳಲ್ಲಿ ಮಾನಸಿಕ ಅಸ್ವಸ್ಥರು ಕಂಡುಬಂದರೆ ನೀವು ಸಹಾಯ ಮಾಡಿರಿ ಹಾಗೂ ಆರ್ವಿಟ್ ಸಂಸ್ಥೆಗೆ ತಿಳಿಸಿರಿ ಎಂದು ಮಾಹಿತಿ ನೀಡಲಾಯಿತು.

## "ಮಾನಸಿಕ ಅಸ್ವಸ್ಥರ ಮನೆ ಭೇಟಿಮಾದಿ ಔಷಧಿ ಪರಿಶಿಲನೆ"



ಮಾರ್ಚ್ 03.2024 ರಂದು ಹುಮನಾಬಾದ್ ತಾಲೂಕಿನ ಹೀಲಾಲಪೂರ ಗ್ರಾಮದ ಮಾನಸಿಕ ಅಸ್ವಸ್ಥರ ಮನೆ ಭೇಟಿ ಮಾಡಲಾಯಿತು. ಈ ಹಿಂದೆ ಮಾನಸಿಕ ಅಸ್ವಸ್ಥ ವ್ಯಕ್ತಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದರು, ಔಷಧಿ ತೆಗೆದುಕೋಳ್ಳುತ್ತದ್ದರು. ದಿನ ಕಳೆದಂತೆ ವೈದ್ಯರ ಸಲಹೆ ಪಡೆಯದೆ ಮಾತ್ರೆಗಳನ್ನು ನಿಲ್ಲಿಸಿದ್ದ, ಆದ್ದರಿಂದ ಈ ವ್ಯಕ್ತಿ ಮತ್ತೆ ಖಿನ್ನತೆಗೆ ಒಳಗಾಗಿ ತೀವ್ರ ಮಾಸಿಕ ಕಾಯಿಲೆಗೆ ತುತ್ತಾಗಿದನ್ನು, ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ನೀಲಕಂಠ ಗ್ರಾಮದ ಆಶಾ ಕಾರ್ಯಕರ್ತರ ಸಹಾಯದಿಂದ ಮಾನಸಿಕ ಅಸ್ವಸ್ಥರ ಮನೆ ಭೇಟಿ ಮಾಡಿ, ವೈದ್ಯರು ಮಾತ್ರೆಗಳನ್ನು ನಿಲ್ಲಿಸು ಎಂದು ಹೇಳುವವರೆಗೂ ಮಾತ್ರಗಳನ್ನು ನಿಲ್ಲಿಸಬೇಡಿ ಅವುಗಳನ್ನು ಪ್ರತಿನಿತ್ಯ ಸರಿಯಾದ ಸಮಯಕ್ಕೆ ಮಾತ್ರೆಗಳನ್ನು ಸೇವಿಸಬೇಕು ಎಂದು ಪೋಷಕರ ಮನಒಲಿಸಲಾಯಿತು. ಆದುದ್ದರಿಂದ ಇನ್ನು ಮುಂದೆ ವೈದ್ಯರ ಮಾರ್ಗದರ್ಶನದಂತೆ ನಡೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿರುತ್ತಾರೆ.

## "ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ"



ಮಾರ್ಚ್ 06.2024 ರಂದು ರೇಕುಳಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಆರ್ಬಿಟ್ ಸಂಸ್ಥೆ ಹೊಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜೀ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ, ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್‌ಕುಮಾರ್ ಅವರು ಮಕ್ಕಳಿಗೆ ಮಾಹಿತಿ ನೀಡುತ್ತ, ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆ ಎಂದರೇನು? ಮತ್ತು ಮಾನಸಿಕ ಕಾಯಿಲೆ ಲಕ್ಷಣಗಳ ಬಗ್ಗೆ ಮಾಹಿತಿ ನೀಡಿದರು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಒಟ್ಟು 60 ಮಕ್ಕಳು ಹಾಗು ಶಿಕ್ಷಕರು ಭಾಗವಹಿಸಿದ್ದರು. ಭಾಗವಹಿಸಿದ ಎಲ್ಲರು ಈ ಕಾರ್ಯಕ್ರಮದ ಎಪಯೋಗ ಪಡೆದುಕೊಂಡರು.



ಮಾರ್ಚ್ 24 2024 ರಂದು ಚಿಟಗುಪ್ಪ ತಾಲೂಕಿನ ಇಟಗಾ ಗ್ರಾಮದಲ್ಲಿ ಮಲ್ಲಿಗೆ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ 12 ಜನ ಮಹಿಳೆಯರು ಭಾಗವಹಿಸಿದರು. ಆರೋಗ್ಯ ಎಂದರೇನು? ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಅಸ್ವಸ್ಥರ ಲಕ್ಷಣಗಳು, ವಿಧಗಳು ಹಾಗೂ ಮಾನಸಿಕ ಅಸ್ವಸ್ಥತೆಗೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ಸಂಘದ ಸದಸ್ಯರಿಗೆ ಮಾಹಿತಿಯನ್ನು ನೀಡಿದರು. ತಮ್ಮ ಸಮುದಾಯದಲ್ಲಿ, ಓಣಿಗಳಲ್ಲಿ ಮಾನಸಿಕ ಅಸ್ವಸ್ಥರು ಕಂಡು ಬಂದಲ್ಲಿ ಹೆಲ್ಪ್ ಲೈನ್ ನಂಬರ್ 9036664271 ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಸಭೆಯಲ್ಲಿ ತಿಳಿಸಲಾಯಿತು.

## “ಕಾರ್ಯ ಕ್ಷೇತ್ರ ಪರಿಶೀಲನೆ, ವಿಕಲಚೇತನರ ಸಂಘಕ್ಕೆ ಭೇಟಿ”



ಮಾರ್ಚ್ 18.2024ರಂದು ಹುಮನಾಬಾದ್ ತಾಲೂಕಿನ ಕಪ್ಪರ್ಗಾವ್ ಗ್ರಾಮಕ್ಕೆ ಅಜೀಮ್ ಪ್ರೇಮ್ ಜಿ ಫೌಂಡೇಶನ್ ನ ಪ್ರತಿನಿಧಿಗಳು ಕ್ಷೇತ್ರ ಕಾರ್ಯ ಪರಿಶೀಲನೆಗೆಂದು ಭೇಟಿ ನೀಡಿದರು. ನವಜೀವನ ಕಾರ್ಯಕ್ರಮದ ಅಡಿಯಲ್ಲಿ ರಚನೆಯಾದ ವಿಕಲಚೇತನರ ಸಂಘಕ್ಕೆ ಭೇಟಿ ನೀಡಿ ಅವರೊಂದಿಗೆ ಚರ್ಚಿಸುತ್ತಾ, ಸಂಘದ ರಚನೆಯಿಂದ ಆದ ಪ್ರಯೋಜನಗಳ ಕುರಿತು ಮಾಹಿತಿ ಪಡೆದುಕೊಂಡರು. ಸಂಘದ ಮುಂದಿನ ಕಾರ್ಯ ಯೋಜನೆಗಳ ಕುರಿತು ಸದಸ್ಯರೊಂದಿಗೆ ಚರ್ಚಿಸಿದರು. ಸ್ಥಳೀಯ ಕಾರ್ಯಕರ್ತರು ಯಾವೆಲ್ಲ ಮಾಹಿತಿಗಳು ನೀಡುತ್ತಿದ್ದಾರೆ, ಅವುಗಳ ಪ್ರಯೋಜನ ತಾವೇಷ್ಟು ಪಡೆದುಕೊಂಡಿದ್ದಾರೆ ಎಂಬುದಾಗಿ ಪರಿಶೀಲಿಸಿದರು. ಈ ಪರಿಶೀಲನ ಭೇಟಿಯಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಹಾಗೂ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಪ್ರವಿಣ, ಕಾರ್ಯಕರ್ತೆಯಾದ ಶ್ರೀಮತಿ ಪ್ರೀತಿ, ಅರುಣ್ ಕುಮಾರ್, ಆಪ್ತ ಸಮಾಲೋಚಕರಾದ ಅರುಣ್‌ಕುಮಾರ್ ಭಾಗವಹಿಸಿದ್ದರು.

## “ನವಜೀವನ ಕಾರ್ಯಕರ್ತರಿಗೆ ಕ್ಲಾಸ್ ರೂಮ್ ತರಬೇತಿ”

ಮಾರ್ಚ್ 8 2024 ರಂದು ಹುಮ್ನಾಬಾದ್ ತಾಲೂಕಿನ ಆರ್ಬಿಟ್ ಸಂಸ್ಥೆಯಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಿಗೆ ಮಾನಸಿಕ ಅಸ್ವಸ್ಥರ ಕ್ಲಾಸ್ ರೂಮ್ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಎ.ಪಿ.ಡಿ ಸಂಸ್ಥೆಯ ಶ್ರೀ ಸಂತೋಷ್ ಗುಲ್ಬರ್ಗ ವಲಯದ ಸಂಯೋಜಕರು ಭಾಗವಹಿಸಿ ತರಬೇತಿಯನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರು ಭಾಗವಹಿಸಿ ತರಬೇತಿಯನ್ನು ಪಡೆದುಕೊಂಡರು.



## “ಮಾನಸಿಕ ಅಸ್ವಸ್ಥರ ಕುರಿತು ಜಾಗ್ರತಿ ಕಾರ್ಯಕ್ರಮ”

ಮಾರ್ಚ್ 14.2024 ರಂದು ಹುಮ್ನಾಬಾದ್ ನಗರದಲ್ಲಿ ಆರ್ಬಿಟ್ ಸಂಸ್ಥೆ ಮತ್ತು ಅಜಿಮ್ ಪ್ರೇಮ್ ಜೀ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಸೈಲಿನ್ನ ಆಸ್ಪತ್ರೆಯಲ್ಲಿ ಆಶಾ ಕಾರ್ಯಕರ್ತೆಯರಿಗೆ ಮಾನಸಿಕ ಆರೋಗ್ಯದ ಕುರಿತು ಜಾಗ್ರತಿ ಕಾರ್ಯಕ್ರಮವನ್ನು ಮಾಡಿದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಲೋಕೇಶ್ ಮಾನಸಿಕ ಆರೋಗ್ಯದ ಕುರಿತು ಮಾತನಾಡಿದರು. ಮಾನಸಿಕ ಆರೋಗ್ಯ ಎಂದರೇನು? ಅದರ ಲಕ್ಷಣಗಳು, ಮಾನಸಿಕ ಅಸ್ವಸ್ಥತೆಗೆ ಲಭ್ಯವಿರುವ ಸೂಕ್ತ ಚಿಕಿತ್ಸೆ ಹಾಗೂ ಮಾನಸಿಕವಾಗಿ ಆರೋಗ್ಯದಿಂದಿರಲು ಅನುಸರಿಸಬೇಕಾದ ಜೀವನ ಕ್ರಮದ ಬಗ್ಗೆ ತಿಳಿಸಿಸರು. ಈ ಕಾರ್ಯಕ್ರಮದಲ್ಲಿ ಒಟ್ಟು 15 ಜನ ಆಶಾ ಕಾರ್ಯಕರ್ತೆಯರು ಭಾಗವಹಿಸಿದರು. ಭಾಗವಹಿಸಿದ ಸರ್ವರೂ ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.



## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

### “ಪಲ್ಸ್ ಪೋಲಿಯೋ ಲಸಿಕೆ ಅಭಿಯಾನ”



ಮಾರ್ಚ್ 2.2024 ರಂದು ಹುಮ್ನಾಬಾದ್ ತಾಲೂಕಿನ ಒತ್ತಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪಲ್ಸ್ ಪೋಲಿಯೋ ಜಾಗೃತಿ ಕಾರ್ಯಕ್ರಮವನ್ನು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ರವರು ಹಮ್ಮಿಕೊಂಡಿದ್ದರು. ಈ ಜಾಗೃತ ಕಾರ್ಯಕ್ರಮದಲ್ಲಿ 100 ಶಾಲಾ ಮಕ್ಕಳು, ಶಿಕ್ಷಕರು ಹಾಗೂ ಆರೋಗ್ಯ ಇಲಾಖೆಯ ಸಿಬಂಧ್ಧಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸೂರ್ಯಕಾಂತ್ ಅವರು ಪಲ್ಸ್ ಪೋಲಿಯೋ ಕುರಿತು ಮಾಹಿತಿಯನ್ನು ನೀಡಿದರು. ಭಾರತವು ಪೋಲಿಯೋ ಮುಕ್ತ ದೇಶವಾಗಿದೆ. ಆದರೆ ಕೆಲವು ದೇಶಗಳಲ್ಲಿ ಭೀತಿ ಉಂಟು ಮಾಡುತ್ತಿದ್ದು ನಮ್ಮ ದೇಶದಲ್ಲಿ ಮರು ಕಳಿಸುವ ಸಾಧ್ಯತೆ ಇದೆ. ಪ್ರತಿಬಾರಿಯೂ ಎರಡು ಹನಿ ಪೋಲಿಯೋ ಲಸಿಕೆ ಹಾಕಿಸಿ ನಿಮ್ಮ ಮಗುವಿನ ಸಂಪೂರ್ಣ ರಕ್ಷಣೆಯನ್ನು ಖಚಿತ ಪಡಿಸಿಕೊಳ್ಳಿ. ಪೋಲಿಯೋ ವಿರುದ್ಧ ಭಾರತ ಸಾಧಿಸಿರುವ ಗೆಲುವನ್ನು ಮುಂದುವರಿಸಲು ನಮ್ಮ ಜೊತೆ ಕೈಜೋಡಿಸಿ ಶಾಶ್ವತ ಅಂಗವಿಕಲತೆಯನ್ನು ತರಬಲ್ಲ ಪೋಲಿಯೋವನ್ನು ಲಸಿಕೆ ಮೂಲಕ ಪ್ರತಿರೋಧಿಸೋಣ ಎಂದು ಮಾಹಿತಿ ನೀಡಿದರು.

## "ಲೋಕಸಭೆ ಚುನಾವಣೆ ಕುರಿತು ಸಾಮಾನ್ಯ ಮಾಹಿತಿ"



ಮಾರ್ಚ್ 19 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಕೇಡ್ ಬಿ ಗ್ರಾಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಸಂಯೋಜಕೀಯಾದ ಶ್ರೀಮತಿ ಮಮತಾ ಅವರು ಲೋಕಸಭೆ ಚುನಾವಣೆ ಕುರಿತು ಸಾಮಾನ್ಯ ಮಾಹಿತಿಯನ್ನು ನೀಡಿದರು. ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಸುವಿಕೆ, ತಿದ್ದುಪಡೆ ಮಾಡುವಿಕೆ ಹಾಗೂ ವಿಳಾಸ ಬದಲಾವಣೆ ಕುರಿತು ಮಾಹಿತಿಯನ್ನು ನೀಡಿದರು. ಹಾಗು ಎರಡು ಹೊಸ ಅರ್ಜಿಗಳನ್ನು ಸಲ್ಲಿಸಿದರು. ಪ್ರತಿಯೊಬ್ಬರು ಮತದಾನ ಮಾಡುವುದು ಕಡ್ಡಾಯವಾಗಿದೆ. ತಮ್ಮ ಅಮೂಲ್ಯವಾದ ಮತವನ್ನು ಹಣ, ಮದ್ಯಪಾನಕ್ಕಾಗಿ ಮಾರಿಕೊಳ್ಳಬೇಡಿ ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಬಹು ಸಂಖ್ಯೆಯಲ್ಲಿ ಮಹಿಳಾ ಪುರುಷರು ಪಾಲುಗೊಂಡಿದ್ದರು

## "ಕೇಂದ್ರ ಆಧಾರಿತವಾಗಿ ಮಕ್ಕಳಿಗೆ ಊತ್ತೆಜಕ ಚಟುವಟಿಕೆ"



ಮಾರ್ಚ್ 2.2024 ರಂದು ಹುಮ್ನಾಬಾದ್ ತಾಲೂಕಿನ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಕವಿತಾ, ಆರ್ಬಿಟ್ ಸಂಸ್ಥೆಯ ಕೇಂದ್ರದಲ್ಲಿ ವಾಕ್‌ದೋಷ ಹೊಂದಿದ ಮಕ್ಕಳಿಗೆ ವಿಕಲತೆಯಿಂದ ಹೊರ ತರಲು ಸಣ್ಣ ಸಣ್ಣ ವಸ್ತುಗಳು ಜೋಡಿಸುವದು, ಅ, ಆ, ದಿಂದ ಅಂ ಅಃ ವರೆಗೆ ಅಕ್ಷರಗಳನ್ನು ಓದಿಸುವುದು ಮತ್ತು ವಸ್ತುಗಳನ್ನು ಸರಿಯಾಗಿ ಜೋ ಡಿಸುವುದು, ಪ್ರಾಣಿಗಳ ಹೆಸರು ಹೇಳಿಸುವುದು, ಶಬ್ದಗಳನ್ನು ಹೇಳಿಕೊಡುತ್ತ, ಬಣ್ಣಬಣ್ಣದ ಸಾಮಾನುಗಳ ಹೆಸರು ಹೇಳುವ ಚಟುವಟಿಕೆ ಮಾಡಿಸಲಾಯಿತು. ಅದೇ ರೀತಿಯಾಗಿ ಪೋಷಕರಿಗೂ ಸಹ ಮಕ್ಕಳಿಗೆ ಮನೆಯಲ್ಲಿ ಇದೇ ತರಹ ಚಟುವಟಿಕೆ ಮಾಡಿಸುವುದನ್ನು ಹೇಳಿಕೊಡಿ ಎಂದು ತಿಳಿಸಲಾಯಿತು. ಕೇಂದ್ರದಲ್ಲಿ ಮಕ್ಕಳಿಗೆ ಚಟುವಟಿಕೆ ಮಾಡಿಸಿಕೊಂಡು ಹೋ ಗುವುದರಿಂದ ನಮ್ಮ ಮಕ್ಕಳಲ್ಲಿ ಬಹಳ ಬದಲಾವಣೆ ಕಂಡುಬಂದಿದೆ ಎಂದು ಪೋಷಕರು ಆರ್ಬಿಟ್ ಸಂಸ್ಥೆಯವರು ಬಹಳ ಉತ್ತಮವಾದ ಕೆಲಸ ಮಾಡುತ್ತಿದ್ದಾರೆ ಇದರಿಂದ ನಮಗೆ ತುಂಬಾ ಸಹಾಯವಾಗಿದೆ ಎಂದು ಸಂತೋಷದಿಂದ ಧನ್ಯವಾದಗಳು ವ್ಯಕ್ತಪಡಿಸಿದ್ದಾರೆ.

## "ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ"

### "ವಿಶ್ವ ಮಹಿಳಾ ದಿನಾಚರಣೆ 2024 ಧ್ಯೇಯ ವಾಕ್ಯ : "ಆರ್ಥಿಕ ಸಬಲೀಕರಣದೊಂದಿಗೆ ಲಿಂಗ ಸಮಾನತೆ"



ಮಾರ್ಚ್ 11 ರಂದು ಔರಾದ್ ತಾಲೂಕಿನ ಏಕಂಬಾ ಗ್ರಾಮದಲ್ಲಿ ಸ್ತ್ರೀವಾಣಿ ಸಂಸ್ಥೆ ಮತ್ತು ಆರ್ಬಿಟ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಫಾ. ಅನಿಲ್ ಕ್ರಾಸ್ತಾ ಮಾತನಾಡಿ, ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸದೃಢರಾಗಬೇಕು. ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗಿರುವ ಮೀಸಲಾತಿಯ ಪ್ರಯೋಜನ ಪಡೆದುಕೊಳ್ಳಬೇಕು, ಬಾಲ್ಯ ವಿವಾಹ ಮತ್ತು ಗರ್ಭಪಾತ ತಡೆಗಟ್ಟಲು ಮುಂದಾಗಬೇಕು, ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ಶೌಚಾಲಯವನ್ನು ನಿರ್ಮಿಸಿಕೊಳ್ಳಬೇಕು, ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರಗಳನ್ನು ಕಲಿಸಬೇಕು ಎಂದು ತಿಳಿ ಹೇಳಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 127 ಮಹಿಳೆಯರು ಭಾಗವಹಿಸಿ ಮಹಿಳಾ ದಿನಾಚರಣೆಯನ್ನು ಅತಿ ವಿಜ್ರಂಭಣೆಯಿಂದ ಆಚರಿಸಿದರು.

### "ಮಾನಸಿಕ ಅಸ್ವಸ್ಥರ ಮನೆ ಭೇಟಿ ನಿಡಿ ಡಿ.ಎಮ್.ಎಚ್.ಪಿ ಕ್ಯಾಂಪ್‌ಗೆ ಬರುವಂತೆ ಮನ ಒಲಿವು"



ಮಾರ್ಚ್ 02.24 ರಂದು ಸಂಯೋಜಕರ ನಿರಕ್ಷಣೆಯಲ್ಲಿ ಭಾಲ್ಕಿ ತಾಲೂಕಿನ ಕೋರೂರು ಗ್ರಾಮದ ಮಾನಸಿಕ ಅಸ್ವಸ್ಥರ ಮನೆ ಭೇಟಿ ನೀಡಿದ ಸಂದರ್ಭದಲ್ಲಿ, ಮಾನಸಿಕ ಅಸ್ವಸ್ಥೆಯಾದ ಲಲಿತಾಳ ಖಾಸಗಿ ಆಸ್ಪತ್ರೆಯ ಮಾತ್ರೆಗಳನ್ನು ಪರಿಶೀಲಿಸಿ ಡಿ ಎಮ್ ಎಚ್ ಪಿ ಗೆ ಬರುವಂತೆ ಮನ ಒಲಿಸಲಾಯಿತು ಹಾಗೂ ಸರ್ಕಾರಿ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಮತ್ತು ಕುಟುಂಬದ ಹಿನ್ನೆಲೆ ಹಾಗೂ ಕುಟುಂಬದಲ್ಲಿ ಇರುವಂತಹ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಚುನಾವಣಾ ಗುರುತಿನ ಚೀಟಿ ಪರಿಶೀಲಿಸಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಡ್ಡಾಯವಾಗಿ ತಮ್ಮ ಅಮೂಲ್ಯವಾದ ಮತ ಚಲಾಯಿಸುವಂತೆ ತಿಳಿಸಲಾಯಿತು, ಯು.ಡಿ.ಐ.ಡಿ ಕಾರ್ಡಿನ ಮಾಹಿತಿ ಜೋತೆಗೆ ದಾಖಲೆಗಳನ್ನು ಪರಿಶೀಲಿಸಿ ಕ್ರೋಢೀಕರಣ ಮಾಡಲಾಯಿ.

# “ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ”



ಮಾರ್ಚ್ 18 2024 ರಂದು ಬಸವಕಲ್ಯಾಣ ತಾಲೂಕಿನ, ಯರಂಡಗಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ, ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದಡಿಯಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ಮಾತನಾಡಿ ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆಯ ಲಕ್ಷಣಗಳು, ಮತ್ತು ಮಾನಸಿಕ ಕಾಯಿಲೆಗೆ ಇರುವ ಕಾರಣಗಳನ್ನು ತಿಳಿಸಿ ಮಾನಸಿಕ ಅಸ್ವಸ್ಥರನ್ನು ಪ್ರಥಮ ಹಂತದಲ್ಲಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ, ಉಚಿತವಾದ ತಪಾಸಣೆ ಮತ್ತು ಚಿಕಿತ್ಸೆಗೆ ಒಳಪಡಿಸಿ ಸಮಾಜದ ಮುಖ್ಯ ವಾಹಿನಿಗೆ ತಂದು ಪುನರ್ವಸತಿ ಕಲ್ಪಿಸುವುದೇ ಈ ಸಂಸ್ಥೆಯ ಉದ್ದೇಶವಾಗಿದೆ. ಈ ಕಾರ್ಯಕ್ರಮದಲ್ಲಿ ಶಾಲಾ ಮುಖ್ಯ ಗುರುಗಳು, ಶಿಕ್ಷಕರು ಹಾಗೂ ಮಕ್ಕಳು ಸೇರಿ ಒಟ್ಟು 97 ಜನರು ಭಾಗವಹಿಸಿ ಇದರ ಸದುಪಯೋಗ ಪಡೆದು ಕೊಂಡಿದ್ದರು.



ಮಾರ್ಚ್ 12 2024 ರಂದು ಬೀದರ್ ಜಿಲ್ಲೆಯ ಔರಾದ್ ತಾಲೂಕಿನ "ಜೋಜನ" ಪಂಚಾಯಿತಿಯಲ್ಲಿ ಗ್ರಾಮದ ಹಿರಿಯ ಮುಖಂಡರು ಹಾಗೂ ಪಂಚಾಯಿತಿ ಸದಸ್ಯರು ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ ಆರ್ಬಿಟ್ ಸಂಸ್ಥೆಯ ನವ ಜೀವನ ಎಲ್ ಎಲ್ ಎಫ್ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಎಲ್ ಎಲ್ ಎಲ್ ಎಫ್ ಕಾರ್ಯಕರ್ತರಾದ ಶ್ರೀ ಶಿವಕಾಂತ, ಮಾನಸಿಕ ಅಸ್ವಸ್ಥರ ಕುರಿತು ಮಾತನಾಡಿದರು, ಬಹು ಮುಖ್ಯವಾಗಿ ಈ ಆಧುನಿಕ ಬದುಕಿನಲ್ಲಿ ಮಾನಸಿಕ ಕಾಯಿಲೆ ಎನ್ನುವುದು ಪ್ರತಿಯೊಬ್ಬರಲ್ಲೂ ಕಂಡು ಬರುತ್ತಿರುವುದು ಸಹಜವಾಗಿದೆ, ಕೆಲವರಲ್ಲಿ ತೀವ್ರ ಪ್ರಮಾಣದಲ್ಲಿ, ಕೆಲವರಲ್ಲಿ ಸೌಮ್ಯ ಪ್ರಮಾಣದಲ್ಲಿ, ಮಾನಸಿಕ ಒತ್ತಡ ಕಂಡುಬರುತ್ತದೆ, ವಿನಾಕಾರಣ ಸಣ್ಣ ಸಣ್ಣ ವಿಷಯಕ್ಕೆ ಮಕ್ಕಳಲ್ಲಿ, ಹಿರಿಯರಲ್ಲಿ, ಹಾಗೂ ಮಹಿಳೆಯರಲ್ಲಿ ಈ ಕಾಯಿಲೆ ಕಾಣಿಸಿಕೊಳ್ಳುವುದು ನೀವು ನೋಡುತ್ತಿದ್ದೀರಿ, ಮಕ್ಕಳಿಗೆ ಪರೀಕ್ಷೆಯ ಭಯ ಮತ್ತು ಆತಂಕ ಹಾಗೂ ಪುರುಷರು, ಯುವಕರು ಅಂತ ಬಂದಾಗ ಪ್ರೀತಿ ಪ್ರೇಮ ವಿಚಾರವಾಗಿ, ನಿರುದ್ಯೋಗ ವಿಚಾರವಾಗಿ, ಇನ್ನಿತರ ವ್ಯಾಪಾರ ನಷ್ಟವಾದಾಗ ಮಾನಸಿಕ ಅಸ್ವಸ್ಥತೆಗೆ ತುತ್ತಾಗುತ್ತಿದ್ದಾರೆ ಅದೇ ರೀತಿ ದಾಂಪತ್ಯದಲ್ಲಿ ಕಲಹ, ಆಸ್ತಿ ವಿಚಾರವಾಗಿ, ವಿನಾಕಾರಣ ಸಂಶಯಪಡುವುದರಿಂದಾಗಿ ಹಾಗೂ ಕೆಲವು ಕಹಿ ಘಟನೆಗಳ ಕುರಿತು ವ್ಯತಿರಿಕ್ತವಾಗಿ ಯೋಚನೆ ಮಾಡಿ ಆ ವ್ಯಕ್ತಿಯ ಮೇಲೆ ಬಲವಾಗಿ ಮಾನಸಿಕ ಒತ್ತಡಕೆ ಸಿಲುಕುತ್ತಿದ್ದಾರೆ ಮತ್ತು ಕಾಯಿಲೆಯ ಗುಣಲಕ್ಷಣಗಳು ಹೇಗೆಲ್ಲಾ ಇರುತ್ತವೆ ಎಂಬುದರ ಬಗ್ಗೆ ಎಳೆ ಎಳೆಯಾಗಿ ಸಂಪೂರ್ಣವಾದ ಮಾಹಿತಿಯನ್ನು ಅಲ್ಲಿ ನೆರೆದಿದಂತಹ ಜನರ ಮುಂದೆ ಪ್ರಸ್ತುತಪಡಿಸಿದರು, ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಉದ್ದೇಶವೇನೆಂದರೆ ಔರಾದ್ ತಾಲೂಕಿನ ಎಲ್ಲಾ ಗ್ರಾಮದಲ್ಲಿರುವಂತಹ ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಿ ಕೊಡುವುದು, ಚಿಕಿತ್ಸೆಯ ನಂತರ ಅವರ ಮನೆ ಭೇಟಿ ಮಾಡಿ ಮಾತ್ರೆ ಪರೀಕ್ಷಿಸುವುದು ಹಾಗೂ ಅವರ ಮೂಲಭೂತ ಸೌಕರ್ಯಗಳಾದ ಸರಕಾರಿ ಯೋಜನೆಗಳ ಕುರಿತು ಮಾಹಿತಿ ಕೊಟ್ಟು ಅವರಿಗೆ ಸಿಗುವ ಹಾಗೆ ಸಹಾಯ ಮಾಡುವುದು, ಒಟ್ಟಿನಲ್ಲಿ ಸಾಮಾನ್ಯ ವ್ಯಕ್ತಿಗೆ ದೊರಕುವ ಸ್ಥಾನಮಾನವನ್ನು ಚಿಕಿತ್ಸೆಯ ಮೂಲಕ ಗುಣಪಡಿಸಿ ಸಮಾಜಮುಖಿಯನ್ನಾಗಿ ಮಾಡುವುದು ಸಂಸ್ಥೆಯ ಉದ್ದೇಶವಾಗಿದೆ ಕಾರ್ಯಕ್ರಮದ ಮಾಹಿತಿಯನ್ನು ಗ್ರಾಮದ ಜನ ಪಡೆದುಕೊಂಡರು.



ಮಾರ್ಚ್ 20 ರಂದು ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ " ಲಾಧಾ " ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್ ಎಲ್ ಎಲ್ ಎಫ್ ಕಾರ್ಯಕ್ರಮದಡಿಯಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಅಮರ್ ಮಾನಸಿಕ ಅಸ್ವಸ್ಥರ ಕುರಿತು ಮಾತನಾಡಿದರು, ಮಾನಸಿಕ ಅಸ್ವಸ್ಥತೆ ಏಕೆ ಮತ್ತು ಹೇಗೆ ಬರುತ್ತದೆ? ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ವಿವರಿಸಿದ್ದರು. ಗ್ರಾಮದಲ್ಲಿರುವಂತಹ ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಿ ಕೊಡುವುದು ಚಿಕಿತ್ಸೆಯ ನಂತರ ಅವರ ಮನೆ ಭೇಟಿ ಮಾಡಿ ಮಾತ್ರೆ ಪರೀಕ್ಷಿಸುವುದು ಹಾಗೂ ಅವರ ಮೂಲಭೂತ ಸೌಕರ್ಯಗಳಾದ ಸರಕಾರಿ ಯೋಜನೆ ಮಾಹಿತಿ ಕೊಟ್ಟು ಅವರಿಗೆ ಸಿಗುವ ಹಾಗೆ ಮಾಡುವುದು ಒಟ್ಟಿನಲ್ಲಿ ಸಾಮಾನ್ಯ ವ್ಯಕ್ತಿಗೆ ದೊರಕುವ ಸ್ಥಾನಮಾನವನ್ನು ಚಿಕಿತ್ಸೆ ಮೂಲಕ ಗುಣಪಡಿಸಿ ಸಮಾಜಮುಖಿಯನ್ನಾಗಿ ಮಾಡುವುದು ಸಂಸ್ಥೆಯ ಉದ್ದೇಶವಾಗಿದೆ. ಈ ಕಾರ್ಯಕ್ರಮದಲ್ಲಿ 40 ಜನ ವಿದ್ಯಾರ್ಥಿಗಳು 2 ಶಿಕ್ಷಕರು ಉಪಸ್ಥಿತರಿದ್ದರು.

## “ನರೇಗಾ ಯೋಜನೆ ಅಡಿಯಲ್ಲಿ  ಕೂಲಿ ಕಾರ್ಮಿಕರಿಗೆ ಮಾನಸಿಕ ಅಸ್ವಸ್ಥತೆ ಹಾಗೂ ಕ್ಯಾನ್ಸರ್ ಕುರಿತು ಜಾಗೃತಿ”



ಮಾರ್ಚ್ 14 ರಂದು ಬಸವಕಲ್ಯಾಣ ತಾಲೂಕಿನ ಯರಬಾಗ್  ಗ್ರಾಮದ ನರೇಗಾ ಯೋಜನೆ ಅಡಿಯಲ್ಲಿ  ಕೂಲಿ ಕಾರ್ಮಿಕರಿಗೆ ಆರ್ಬಿಟ್ ಸಂಸ್ಥೆ  ಮತ್ತು ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಅಡಿಯಲ್ಲಿ  ಮಾನಸಿಕ ಆರೋಗ್ಯ ಹಾಗೂ ಕ್ಯಾನ್ಸರ್  ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಆರ್ಬಿಟ್  ಸಂಸ್ಥೆಯ ಕಾರ್ಯಕರ್ತರಾದ ಶ್ರೀ ವಿಜಯಕುಮಾರ್ ಅವರು ಮಾತನಾಡಿ, ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಗಳನ್ನು ಪ್ರಥಮ ಹಂತದಲ್ಲಿ ಗುರುತಿಸಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಉಚಿತವಾದ  ತಪಾಸಣೆ ಮತ್ತು ಚಿಕಿತ್ಸೆ ಮೂಲಕ ಸ್ಪಂದಿಸಿ, ಮಾನಸಿಕ ಅಸ್ವಸ್ಥರನ್ನು ಸ್ವತಂತ್ರ ಹಾಗು ಸಹಜ ಜೀವನವನ್ನು ನಡೆಸಲು ಪ್ರೇರೇಪಿಸಲಾಯಿತು. ಕ್ಯಾನ್ಸರ್ ಕಾಯಿಲೆ ಎಂದರೇನು?  ಕ್ಯಾನ್ಸರ್‌ನ ವಿಧಗಳು, ಅದರ ಲಕ್ಷಣಗಳು ಹಾಗೂ ಕ್ಯಾನ್ಸರ್ ತಡೆಗಟ್ಟುವ ವಿಧಾನಗಳ ಕುರಿತು ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 48 ಜನ ನರೇಗಾ ಕೂಲಿ ಕಾರ್ಮಿಕರು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಂಡರು.

## “ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ”



ಮಾರ್ಚ್ 6 ರಂದು  ಔರಾದ್ ತಾಲ್ಲೂಕಿನ ಚಟ್ನಾಳ್ ಗ್ರಾಮದ ಹನುಮಾನ್ ಮಂದಿರ ದಲ್ಲಿ ಅರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದಡಿಯಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗ್ರತಿ ಕಾರ್ಯಕ್ರಮ ನೀಡಲಾಯಿತು. ಈ ಕಾರ್ಯಕ್ರಮದಲಿ ಸಂಪನ್ಮೂಲ ವ್ಯಕ್ತಿಗಳಾದ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಆನಂದ ಮತ್ತು ಶ್ರೀ ಯೋಹನ್ ಉಪಸ್ಥಿತರಿದ್ದರು. ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆಯ ಗುಣಲಕ್ಷಣಗಳು ಯಾವವು? ಮಾನಸಿಕ ಖಾಯಿಲೆಗೆ ಸಂಬಂಧಿಸಿದ ಚಿಕಿತ್ಸೆ ಬಗ್ಗೆ, ಚುನಾವಣಾ ಗುರುತಿನ ಚೀಟಿಯ  ಕುರಿತು ವಿವರವಾಗಿ ತಿಳಿಸಿದರು. ಹಾಗೇ ನಮ್ಮ ಸಂಸ್ಥೆಯ ಮಾನಸಿಕ ಅಸ್ವಸ್ಥರ ಸಹಾಯ ವಾಣಿ ಸಂಖ್ಯೆ ನೀಡಿದ್ದೇವೆ ಅಗತ್ಯವಿರುವವರು ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಒಟ್ಟು 53 ಜನಸಾಮಾನ್ಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



ಮಾರ್ಚ್ 22.2024 ರಂದು ಔರಾದ್ ತಾಲೂಕಿನ ವಡಗಾಂವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಜಾಗ್ರತಿ ಕಾರ್ಯಕ್ರಮಬನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಬಬನ್ ಮಾತನಾಡಿದರು, ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಖಾಯಿಲೆಯ ಲಕ್ಷಣಗಳು. ಮಾನಸಿಕ ಖಾಯಿಲೆಗೆ ಸಂಬಂಧಿಸಿದ ಚಿಕಿತ್ಸೆ ಬಗ್ಗೆ ವಿವರವಾಗಿ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು ಹಾಗು 40 ಆಶಾ ಕಾರ್ಯಕರ್ತೆಯರು ಭಾಗವಹಿಸಿದರು.

## “ಕ್ಷೇತ್ರ  ಆಧಾರಿತ  ಕಾರ್ಯಕ್ರಮ  ತರಬೇತಿ”



ಮಾರ್ಚ್ 07 ತಂದು ಭಾಲ್ಕಿ ಪಟ್ಟಣ, ಹಲ್ಸಿ ಎಲ್, ಅಟ್ಟರ್ಗಾ ಗ್ರಾಮದಲ್ಲಿ  ಎ.ಡಿ.ಪಿ ಸಂಸ್ಥೆಯ ತರಬೇತಿದಾರರಾದ ಸಂತೋಷ್ ರವರಿಂದ ಮಾನಸಿಕ ಅಸ್ವಸ್ಥರ ಕುರಿತು ಕ್ಷೇತ್ರ ಕಾರ್ಯದ ತರಬೇತಿಯು ನವಜೀವನ ಎಲ್.ಎಲ್.ಎಲ್.ಎಫ್ ತಂಡದವರಿಗೆ ನೀಡಲಾಯಿತು. ಈ ಕ್ಷೇತ್ರ ಕಾರ್ಯಗಾರ ತರಬೇತಿಯಲ್ಲಿ ಮಾನಸಿಕ ಅಸ್ವಸ್ಥರಿಎ ಯಾವ ರೀತಿಯಾಗಿ ಚಿಕಿತ್ಸೆ ನೀಡಬೇಕು, ಮನೆಯವರನ್ನು ರೋಗ ಕುರಿತು  ಯಾವರೀತಿಯಾಗಿ ಮನವರಿಕೆ ಮಾಡಬೇಕು ಎಂದು ತಿಳಿಸಲಾಯಿತು. ತರಬೇತಿಯಲ್ಲಿ 4 ಮಾನಸಿಕ ಅಸ್ವಸ್ಥರ ಮನೆ ಭೇಟಿ ಮಾಡಲಾಯಿತು. ಹಾಗೂ 11 ಜನ  ಕಾರ್ಯಕರ್ತರು ಈ ತರಬೇತಿಯಲ್ಲಿ  ಭಾಗವಹಿಸಿದರು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಉಜ್ಜೀವನ ಕಾರ್ಯಕ್ರಮ"

## "ಮೂರನೇ ಹಂತದ ಉಜ್ಜೀವನ ಕಾರ್ಯಕ್ರಮಗಳ ಪರಿಶಿಲನೆ"



ಮಾರ್ಚ್ 02.2024 ರಂದು ಕಾರಿತಾಸ್ ಇಂಡಿಯಾ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಮೂರನೇ ಹಂತದ ರಾಜಮಟ್ಟದ ವ್ಯವಸ್ಥಾಪಕರಾದ ಡಾ. ಹರಿದಾಸ, ಕರ್ನಾಟಕ ರಾಜ್ಯ ಮಟ್ಟದ ಉಜ್ಜೀವನ ಕಾರ್ಯಕ್ರಮದ ಸಹಾಯಕರಾದ ರಾಬರ್ಟ್ ಡಿಸೋಜಾ, ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಹಾಗೂ ಸಹ ನಿರ್ದೇಶಕರಾದ ಫಾದರ್ ದೀಪಕ್ ಕಾರ್ಯಕ್ರಮದ ಪರಿಶಿಲನಾ ಭೇಟಿ ಮಾಡಿದರು. ತಾವು ಮಾಡುವಂತಹ ಕಾರ್ಯಕ್ಷೇತ್ರಗಳಾದ ಫರ್ತಾಬಾದ್ ಮತ್ತು ಉದನೂರ ಗ್ರಾಮಗಳಿಗೆ ಭೇಟಿ ಮಾಡುವ ಮೂಲಕ ಅಭೀವೃದ್ಧಿಯಾಗಿರುವಂತಹ ಕಾರ್ಯಯೋಜನೆಗಳ ಬಗ್ಗೆ ಪರಿಶಿಲಿಸಿದರು. ಸ್ವಸಹಾಯ ಸಂಘಗಳ ಭೇಟಿ ಮಾಡಿ ಮತ್ತು ರೈತರ ಹೋಲಗಳಿಗೆ ಭೇಟಿ ಮಾಡಿ ಸಾವಯವ ಕೃಷಿ, ಮಿಶ್ರ ಬೆಳೆ, ರೂಟ್ ಜೊನ ಸಸಿಗಳ ವೀಕ್ಷಣೆ ಮಾಡುತ್ತಾ ಒಳ್ಳೇಯ ಅಭೀವೃದ್ಧಿ ಕೆಲಸ ಆಗಿದೆ ಎಂದು ಹರ್ಷ ವ್ಯಕ್ತಪಡಿಸಿದರು ಮತ್ತು ಉಜ್ಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರಿಗೆ ಅಭೀನಂದನೆ ಸಲ್ಲಿಸಿದರು.



## "ಸಮುದಾಯದ ಜನರಿಗೆ ಕಲಿಕಾ ಕಾರ್ಯಕ್ರಮ ಕೃಷಿಯೆತರ ಗುಂಪು ಚಟುವಟಿಕೆ"



ಮಾರ್ಚ್ 13.2024 ಕಲಬುರಗಿ ಜಿಲ್ಲೆಯ ಪಾಣೆಗಾಂವ್ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನವೀನ್ ಸಮುದಾಯದ ಜನರಿಗೆ ಕಲಿಕಾ ಕಾರ್ಯಕ್ರಮ ಆಯೋಜಿಸಿದ್ದರು. ಕೃಷಿಯೇತರ ಗುಂಪು ಚಟುವಟಿಕೆಗಳ ಕುರಿತು ಜಾಗೃತಿಯನ್ನು ಮೂಡಿಸಿದರು. ಜನರು ವಲಸೆ ಹೋಗದೆ ಹಾಗೂ ಕೃಷಿಯ ಮೇಲೆ ಹೆಚ್ಚು ಅವಲಬಿಂತರಾಗದೆ. ಕರ್ನಾಟಕ ಸರಕಾರವು ಸ್ವ-ಉದ್ಯೋಗ ಮಾಡಲು ಹಲವಾರು ಕಾರ್ಯಕ್ರಮಗಳ ಮೂಲಕ ಸಬ್ಸಿಡಿ ಲೋನಗಳನ್ನು ನೀಡುತಿದ್ದು ಇದರ ಸದುಪಯೋಗ ಗ್ರಾಮದ ಜನರು ಪಡೆದುಕೊಳ್ಳುವಂತೆ ಮಾಹಿತಿ ನೀಡಿದರು. ಇದೆ ಸಂದರ್ಭದಲ್ಲಿ ಉದ್ಯೋಗಕ್ಕೆ ಇಬ್ಬರು ಸದಸ್ಯರುಗಳ ಅರ್ಜಿಗಳನ್ನು ಹಾಕಲಾಯಿತು. ಕೃಷಿಯೇತರ ಚಟುವಟಿಕೆಗಳಾದ ಅಣಬೆ ಬೇಸಾಯ, ಹೈನುಗಾರಿಕೆ ಜೇನು, ಸಾಕಾಣಿಕೆ, ಕುರಿಸಾಕಾಣಿಕೆ ಹಾಗೂ ಯುವಕ ಯುವತಿಯರಿಗೆ ಉಚಿತ ತರಬೇತಿಗಳು ಹೀಗೆ ಮುಂತಾದವುಗಳ ಸದುಪಯೋಗ ಪಡೆಯುತಾ ತಮ್ಮ ಕೌಟುಂಬಿಕ ಸುಸ್ಥಿರ ಜೀವನೋಪಾಯಕೆ ಅನುಗುಣವಾಗಿ ಸ್ವ-ಉದ್ಯೋಗವನ್ನು ರೂಪಿಸಿಕೋಳಬೇಕೇಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಜನರು ಭಾಗವಹಿಸಿ ಮಾಹಿತಿ ಪಡೆದುಕೋಡರು.

## "ಮುಂಗಾರಿನಲ್ಲಿ ಮಳೆ ನೀರು ಸಂಗ್ರಹಣೆ"

ಮಾರ್ಚ್ 19.2024 ರಂದು ನಾಗನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಸಾವಯವ ಕೃಷಿ ರೈತರಾದ ಆನಂದ ಮತ್ತು ಮಲ್ಲಿಕಾರ್ಜುನ ಪಾಟೀಲ ಅವರ ಹೋಲಕ್ಕೆ ಭೇಟಿ ನೀಡುವ ಮೂಲಕ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಚಂದ್ರಕಾಂತ ಜೂನ್ ತಿಂಗಳ ಮುಂಗಾರಿನಲ್ಲಿ ಮಳೆ ನೀರು ಸಂಗ್ರಹಣೆ ಮಾಡಬೇಕು ಮತ್ತು ಇತ್ತಿಚಿನ ದಿನಗಳಲ್ಲಿ ಉತ್ತರ ಕರ್ನಾಟಕದಲ್ಲಿ ನೀರಿನ ಸಮಸ್ಯೆ ತೀವ್ರಗೊಳ್ಳುತ್ತಿದ್ದು ಜನರು ಅತೀ ಜಾಗೃತೆಯಿಂದ ನೀರನ್ನು ಬಳಸಬೇಕು ಎಂದು ಮಾಹಿತಿ ನೀಡಿದರು. ಹೋಲದಲ್ಲಿ ನೀರು ಹರಿದು ಹೋಗುವ ಸ್ಥಳವನ್ನು ಗುರುತಿಸಿ ಆ ಸ್ಥಳದಲ್ಲಿ ನೀರುನ್ನು ನೀಲ್ಲಿಸಿದರೆ ತಮ್ಮ ಬೋರವೆಲ್ ಪುನರ್ ಚಾಲನೆ ಆಗುವುದು ಮತ್ತು ಬೇಸಿಗೆ ಸಮಯದಲ್ಲಿ ನೀರಿನ ಕೊರತೆ ಬೀಳದಂತೆ ಮಾಡಬಹುದು ಎಂದು ಮಾಹಿತಿ ನೀಡಿದರು.



## “ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆ”



ಮಾರ್ಚ್ 20.2024 ರಂದು ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್‌ರವರು ಉಜ್ಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರಿಗೆ ಮುಂದಿನ ಏಪ್ರಿಲ್ ಮತ್ತು ಜೂನ್ ತಿಂಗಳ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕ್ಷೇತ್ರ ಬದುಗಳು, ಕೃಷಿ ಹೊಂಡಗಳನ್ನು ನಿರ್ಮಿಸುವ ಮುಲಕ ನೀರಿನ ಸಂರಕ್ಷಣೆ ಮತ್ತು ಪರಿಸರಕ್ಕೆ ಸಂಬಂಧ ಪಟ್ಟಂತೆ ಸ್ವಚ್ಛತೆ ಹಾಗೂ ಈ ಎರಡು ತಿಂಗಳಲ್ಲಿ ಅತಿ ಹೆಚ್ಚು ಬಡ ಕುಟುಂಬಗಳಿಗೆ ಸರಕಾರಿ ಯೋಜನೆಗಳಿಗೆ ಅರ್ಜಿ ಸಲ್ಲಿಸುವುದು. ವಿವಿಧ ಇಲಾಖೆಗಳು ಹಾಗು ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ಭೇಟಿ ನೀಡುವ ಮೂಲಕ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು ಎಂದು ತಿಳಿಸಿದ್ದರು.

## “ರೈತ ಸಂಪರ್ಕ ಕೇಂದ್ರದಿಂದ ಯೋಜನೆಯ ಲಾಭ ಪಡೆದ ರೈತರು“

ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಸಂಯೋಜಕರು ಮತ್ತು ಕಾರ್ಯಕರ್ತರು ಸೀತನೂರ್, ನಂದೂರ್ ಕೆ ಮತ್ತು ಪಾಣೆಗಾಂವ್ ಗ್ರಾಮದ ರೈತರ ಭೇಟಿ ಮಾಡಿ, ರೈತ ಸಂಪರ್ಕ ಕೇಂದ್ರದಿಂದ ಸೀಗುವ ಸೌಲಭ್ಯಗಳ ಬಗ್ಗೆ 35 ಜನ ರೈತರಿಗೆ ಕೃಷಿ ಇಲಾಖೆಯಲ್ಲಿ ಸಿಗುವ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. 3 ‘ಕೃಷಿ ಭಾಗ್ಯ’ ಯೋಜನೆಗೆ ಅರ್ಜಿ ಸಲ್ಲಿಸಲಾಯಿತು. 18 ಜನ ರೈತರು ಸ್ಪ್ರಿಂಕ್ಲರ್ ಪೈಪ್ ಯೋಜನೆಗೆ ಅರ್ಜಿ ಸಲ್ಲಿಸಿದರು. 8 ಜನರು ಸ್ಪ್ರಿಂಕ್ಲರ್ ಪೈಪ್ ಪಡೆದುಕೊಂಡರು. ಒಂದು ಸೆಟ್ ಪೈಪ್‌ಗೆ ಮೋತ್ತ 18,000 ರೂಪಾಯಿ, ಒಟ್ಟು 1,44,800 ಮೊತ್ತದ ಯೋಜನೆಯ ಲಾಭ ಪಡೆದುಕೊಂಡರು.







# “ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ”

ಮಾರ್ಚ್ 5.2024 ರಂದು ಕಲಬುರಗಿ ಜಿಲ್ಲೆಯ ಸೇವಾ ಸಂಗಮ ಸಂಸ್ಥೆಯ ಸುಜ್ಞಾನ ಹಾಲ್‌ನಲ್ಲಿ ಮಾನಸಿಕ ಅಸ್ವಸ್ಥರ ಪೋಷಕರಿಗೆ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕೀಯಾದ ಶ್ರೀಮತಿ ಸ್ವಾತಿ ಕ್ಯಾನ್ಸರ್ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಕ್ಯಾನ್ಸರ್‌ನ ಲಕ್ಷಣಗಳು, ಗುಣಗಳು ಹಾಗೂ ಕ್ಯಾನ್ಸರ್ ತಪಾಸಣೆ ಮಾಡಿಸುವುದರಿಂದ ಆಗುವ ಲಾಭಗಳ ಕುರಿತು ಮಾಹಿತಿ ನಿಡಿದರು. ಮನೆಯಲ್ಲಿ ಕೈತೋಟ ಮಾಡಿ ಅದರಿಂದ ಬಂದಂತಹ ತರಕಾರಿಗಳ ಸೇವೆಯಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿಒಟ್ಟು 25 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡರು.





ಮಾರ್ಚ್ 24.2024 ರಂದು ಸೇವಾ ಸಂಗಮ ಸಂಸ್ಥೆಯ ಅಡಿಯಲ್ಲಿ ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ ಕಲಬುರಗಿ ಜಿಲ್ಲೆಯ ಫರಹತಾಬಾದ್ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು. ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಇಂದು ಕ್ಯಾನ್ಸರ್ ಬರುವ ಮುಂಚೆ ತಪಾಸಣೆ ಮಾಡಿಸುವುದರಿಂದ ಆಗುವ ಲಾಭಗಳ ಕುರಿತು ಮಾಹಿತಿ ನಿಡಿದರು. ಕ್ಯಾನ್ಸರ್‌ನ ಗುಣ, ಲಕ್ಷಣಗಳು, ಮತ್ತು ‍್ಯಾನ್ಸರ್‌ನ ವಿಧಗಳಾದ ಚರ್ಮ ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಗರ್ಭಕೋಶ ಕ್ಯಾನ್ಸರ್, ಸ್ತನ ‍್ಯಾನ್ಸರ್ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 21 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡ ಫಲಾನುಭವಿಗಳಾದೆವು.

ಮಾರ್ಚ್ 18,19.2024 ರಂದು ಕಲಬುರಗಿ ತಾಲೂಕಿನಲ್ಲಿ ಬರುವ ನಾಗನಹಳ್ಳಿ, ಸೀತನೂರ್, ಮತ್ತು ಉದನೂರ್ ಹಳ್ಳಿಗಳಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಕ್ಯಾನ್ಸರ್‌ಗೆ ನಿರ್ದಿಷ್ಟ ಕಾರಣಗಳನ್ನು ಗುರುತಿಸಲು ಸಾಧ್ಯವಾಗದಿದ್ದರೂ ಹಲವು ಕಾರಣಗಳು ಸೇರಿ ಕ್ಯಾನ್ಸರ್ ಸಂಭವಿಸುತ್ತದೆ, ಕ್ಯಾನ್ಸರ್ ದೇಹದಯಾವುದೇ ಭಾಗದಿಂದ ಬರಬಹೂದಾದರೂ ಮುಖ್ಯವಾಗಿ ಶ್ವಾಶಕೋಶ, ರಕ್ತ, ಸ್ತ್ರಿಯರಲ್ಲಿ ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್ ಹೆಚ್ಚಾಗಿ ಕಂಡು ಬರುತ್ತವೆ ಎಂದು ತಿಳಿಸಿದರು. ಕ್ಯಾನ್ಸರ್‌ನ ವಿಧಗಳಾದ ಗಂಟಲು ಕ್ಯಾನ್ಸರ್, ಚರ್ಮ ಕ್ಯಾನ್ಸರ್, ರಕ್ತದ ಕ್ಯಾನ್ಸರ್, ಬಾಯಿ ಕ್ಯಾನ್ಸರ್‌ಗಳ ಬಗ್ಗೆ ಮಾಹಿತಿ ನೀಡಿದರು ಈ ಕಾರ್ಯಕ್ರಮದಲ್ಲಿ ಒಟ್ಟು 51 ಜನ ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಳಿಸಿದರು.





# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## "ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಮನೆ ಭೇಟಿ"



ಸೇವಾ ಸಂಗಮ ಸಂಸ್ಥೆ ಹಾಗೂ ಅಜಿಂ ಪ್ರೇಮಜೀ ಫೌಂಡೇಷನ ಸಂಹಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯು ಕಳೆದ ಒಂದು ವರ್ಷದ ಮೌಲ್ಯಮಾಪನಕ್ಕಾಗಿ ಮಾರ್ಚ್ 22.2024 ರಂದು ಅಜೀಂ ಪ್ರೇಮಜೀ ಫೌಂಡೇಷನ ಪ್ರತಿನಿಧಿಗಳಾದ ಶ್ರೀ ಮಹಾದೇವಪ್ಪಾ ಸರ್ ಮತ್ತು ಶ್ರೀ ಜಗನಾಥ ಸರ್ ರವರು ಸೇವಾಸಂಗಮ ಸಂಸ್ಥೆಗೆ ಭೇಟಿ ನೀಡಿದರು. ಮೊದಲು ಕಛೇರಿಯಲ್ಲಿ ಕಾರ್ಯಕ್ರಮದ ಕಾರ್ಯಗಳು ಯಾವ ರೀತಿಯಾಗಿ ನಡೆದು ಬಂದಿವೆ ಎಂದು ಯೋಜನೆಯ ಸಂಯೋಜಕರಾದ ಶ್ವೇತಾ ಮೇಡಂ ವರದಿಯನ್ನು ಪಿ.ಪಿ.ಟಿ ಮುಖಾಂತರ ಮಂಡನೆ ಮಾಡಿದ್ದರು. ನಂತರ ಫರಹತಾಬಾದ ಪಿ.ಎಚ್.ಸಿಯ ವೈದ್ಯಧಿಕಾರಿಗಳನ್ನು ಭೇಟಿ ನೀಡಿದರು. ಗ್ರಾಮಪಂಚಾಯಿತಿ ಸದಸ್ಯರು, ಆಶಾ ಕಾರ್ಯಕರ್ತೆಯರನ್ನು, ಅಂಗನವಾಡಿ ಕಾರ್ಯಕರ್ತೆಯರನ್ನು ಹಾಗೂ ಕೇಂದ್ರದಲ್ಲಿ 3 ಮಕ್ಕಳನ್ನು ಭೇಟಿ ಮಾಡಿದ್ದರು. ಗ್ರಾಮ ಪಂಚಾಯರ್ ವ್ಯಾಪ್ತಿಯಲ್ಲಿ ಬರುವ ನದಿಸಿನ್ನೂರ, ಸಾವಳಗಿ ಗ್ರಾಮದ ಸಿ.ಪಿ ಮಕ್ಕಳನ್ನು ಭೇಟಿ ಮಾಡಿದರು. ಮಗುವಿಗೆ ಉತ್ತೇಜಕ ಚಟುವಟಿಕೆಯನ್ನು ನೀಡುವ ಮೂಲಕ ಮಗುವಿನಲ್ಲಾದ ಬದಲಾವಣೆಯನ್ನು ಕಂಡು ಕಾರ್ಯಕರ್ತರ ಕಾರ್ಯವನ್ನು ಶ್ಲಾಘಿಸಿದರು. ಮನೆ ಭೇಟಿಯಲ್ಲಿ ಮಗುವಿಗೆ ನೀಡಿರುವ ಚಟುವಟಿಕೆಯ ಕುರಿತು ಹಾಗು ಮಗುವಿನಲ್ಲಾದ ಬದಲಾವಣೆ ಕುರಿತು ಮಗುವಿನ ನೀಜ ಸ್ಥಿತಿಯನ್ನು ವಿವರಿಸಲಾಯಿತು. ನಂತರ 'ಉತ್ತೇಜಕ ಚಟುವಟಿಕೆ ನೀಡುವುದರಿಂದ ಮಗುವಿನಲ್ಲಾದ ಬದಲಾವಣೆಗಳ ಕುರಿತು ಮೌಲ್ಯಮಾಪಕರಿಗೆ ಮನವರಿಕೆ ಮಾಡಿ ಕೊಡಲಾಯಿತು. ಹಾಗೆ ಈ ಯೋಜನೆಯಿಂದ ನಿಮ್ಮಗೆ ಎಷ್ಟರ ಮಟ್ಟಿಗೆ ಉಪಯೋಗ ಆಗಿದೆ ಎಂದು ಕೇಳಿದ್ದಾಗ ಪಾಲಕರು ಹೌದು ಸರ್ ಸೇವಾ ಸಂಗಮ ಸಂಸ್ಥೆಯ ಈ ಯೋಜನೆಯಿಂದ ನಮ್ಮಗೆ ತುಂಬಾ ಉಪಯೋಗವಾಗಿದೆ ಎಂದು ಪಾಲಕರು ಹರ್ಷ ವ್ಯಕ್ತಪಡಿಸಿದ್ದರು. ಈ ಭೇಟಿಯಲ್ಲಿ ಶ್ರೀ ಮಹಾದೇವಪ್ಪ ಸರ್ ಮೌಲ್ಯ ಮಾಪನ ಅಧಿಕಾರಿ, ಶ್ರೀ ಜಗನ್ನಾಥ, ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್. ದೀಪಕ್ ಹಾಗು ಸಾಕ್ಯ ಫೌಂಡೇಶನ್ ಬೆಂಗಳೂರಿನ ಶ್ರೀಮತಿ ನೇತ್ರಾ ಮತ್ತು ರಾಜಕುಮಾರ ದೇವರಮನಿ, ಶ್ರೀಮತಿ ಶ್ವೇತಾಅವರು ಉಪಸ್ಥಿತರಿದ್ದರು.



## "ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಪಾಲಕರಿಗೆ ತರಬೇತಿ"



ಮಾರ್ಚ್ 23.2024 ರಂದು ಕಲಬುರಗಿ ನಗರದಲ್ಲಿರುವ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ ಫೌಂಡೇಶನ ಸಂಯುಕ್ತಾಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿಯಲ್ಲಿ 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಪಾಲಕರಿಗೆ ನೇತ್ರ ಮತ್ತು ಜೇನಿಫರ್ (ಸ್ಪೀಚ ಥೇರಪಿಷ್ಟಿ) ಸಕ್ಯ ಫೌಂಡೇಶನ ಬೆಂಗಳೂರ ಅವರು ತರಬೇತಿಯನ್ನು ನೀಡಿದರು. ಮನೆಯೇ ಮೊದಲ ಪಾಠ ಶಾಲೆ ಅನ್ನುವ ಹಾಗೆ ಮಕ್ಕಳ ಬೆಳವಣಿಗೆಯಲ್ಲಿ ಕುಂಠಿತ ಕಂಡುಬಂದಲ್ಲಿ ಪತ್ತೆ ಹಚ್ಚುವದು ಸುಲಭ ಆಗುತ್ತದೆ, ಮಕ್ಕಳಲ್ಲಿರುವ ನ್ಯೂನತೆಯನ್ನು ಕಡಿಮೆ ಮಾಡುವುದರಲ್ಲಿ ಪಾಲಕರ ಪಾತ್ರ ಪ್ರಮುಖವಾಗಿದೆ, ಮನೆಯಲ್ಲಿಯೆ ಇರುವ ವಸ್ತುಗಳನ್ನು ಉಪಯೋಗಿಸಿಕೊಂಡು ಮಕ್ಕಳಿಗೆ ದಿನನಿತ್ಯ ಚಟುವಟಿಕೆ ಮಾಡುವುದರಿಂದ ಅವರಲ್ಲಿರುವ ನ್ಯೂನತೆಯನ್ನು ಹೋಗಲಾಡಿಸಿ ತೀವ್ರತೆಯನ್ನು ಕಡಿಮೆ ಮಾಡಬಹುದು ಎಂದು ತಿಳಿಸಿದರು. ವಿವಿಧ ನಗರಗಳಿಂದ ಒಟ್ಟು 35 ಜನ ಪಾಲಕರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## “ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ಸಾಧನ ಸಲಕರಣೆಗಳ ವಿತರಣೆ”



ಮಾರ್ಚ್ 5.2024 ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀ ಫೌಂಡೇಶನ ಸಂಯುಕ್ತಾಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಅಡಿಯಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ಸಾಧನ ಸಲಕರಣೆಗಳ ಪರಿವೀಕ್ಷಣೆ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಕಲಬುರಗಿಯಲ್ಲಿ 12 ಮಕ್ಕಳಿಗೆ ಸಾಧನ ಸಲಕರಣೆಗಳ ಮೇಜರರ್ಮೆಂಟ್ ಮಾಡಿಸಲಾಯಿತ್ತು. ಒಂದು ಮಗುವಿಗೆ “Hearing Impact & Hearing Massion, 3 ಮಕ್ಕಳಿಗೆ Corner chair measerment ಮಾಡಿಸಲಯಿತ್ತು 8 ಮಕ್ಕಳೀಗೆ C P Chair Measerment ಮಾಡಿಸಲಾಯಿತ್ತು.

## “ಮನುಕೂಲಕ್ಕೆ ಒಂದು ಹೊಸ ಬದಲಾವಣೆಯ ಹೆಜ್ಜೆಯಾಗಿದೆ” : ಅಂಬ್ರೀಶ್ ಉಡಚಣ್



ಕಲಬರುಗಿ: ಸೇವಾ ಸಂಗಮ ಸಂಸ್ಥೆಯ ಮೂಲಕ ತಾಲ್ಲೂಕಿನ ಫರಹತಬಾದ್ ಗ್ರಾಮದಲ್ಲಿ ಕಳೆದ ಒಂದು ವರ್ಷದಿಂದ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಜಾರಿಯಲ್ಲಿದ್ದು, ಈ ಯೋಜನೆಯ ಮೌಲ್ಯಮಾಪನವನ್ನು ಮಾರ್ಚ್ 22.2024 ರಂದು ಅಜೀಂ ಪ್ರೇಮಜೀ ಫೌಂಡೇಶನ್‌ನ ಕಲಬುರಗಿಯ ಪ್ರತಿನಿಧಿಗಳು ಮಾಡಿದರು. ಮೌಲ್ಯಾಮಾಪನದ ಅಧಿಕಾರಿಗಳಾದ ಶ್ರೀ ಜಗನ್ನಾಥ ಹಾಗೂ ಶ್ರೀ ಮಹಾದೇವಪ್ಪಾ ಮೂಲ್ಗೆ ಕಲಬುರಗಿ ಜಿಲ್ಲಾ ಸಂಯೋಜಕರು ಇವರು ಯೋಜನೆಯ ಕಾರ್ಯವ್ಯಪ್ತಿಯಲ್ಲಿ ಬರುವ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಪ್ರೇಮಾ ದೊಡ್ಡಮನಿ, ಶ್ರೀ ಅಂಬ್ರೀಶ ಉಡಚಣ ಸದಸ್ಯರು, ಸಿಬ್ಬಂದಿವರ್ಗದವರಿಗೆ ಭೇಟಿ ಮಾಡುವ ಮೂಲಕ ಯೋಜನೆಯ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ ಪ್ರೇಮಾ ದೊಡ್ಡಮನಿ ಮಾತನಾಡಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯು ಬೇಳವಣಿಗೆಯಲ್ಲಿ ಕುಂಠಿತಗೊಂಡಿರುವ ಮಕ್ಕಳ ಅಭಿವೃದ್ಧಿಯಾಗಲು ಸಹಾಯಕವಾಗಿದೆ ಎಂದು ಹೇಳಿದರು. ಸದಸ್ಯರಾದ ಶ್ರೀ ಅಂಬ್ರೀಶ ಉಡಚಣ ಮಾತನಾಡಿ ಸೇವಾ ಸಂಗಮ ಸಂಸ್ಥೆಯ ಕಾರ್ಯ ಶ್ಲಾಘನೀಯವಾಗಿದೆ ಕಾರಣ ಇಂತಹ ಅದ್ಬುತವಾದ ಯೋಜನೆ ನಮ್ಮ ಗ್ರಾಮದ ಮಕ್ಕಳಿಗೋಸ್ಕರ ತಂದಿದ್ದು ಹಾಗೂ ಅದನ್ನು ಉತ್ತಮ ರೀತಿಯಿಂದ ನಡೆಸಿಕೊಂಡು ಹೋಗುತ್ತಿರುವ ಕಾರ್ಯ ಅದ್ಬುತವಾಗಿದೆ, ನಮ್ಮ ಗ್ರಾಮದಲ್ಲಿ 06 ಮಕ್ಕಳನ್ನು ಗುರುತಿಸಿ ಅವರನ್ನು ಉತ್ತೇಜಕ ಚಟುವಟಿಕೆಗೆ ಒಳಪಡಿಸುವ ಮೂಲಕ ಬೆಳವಣಿಗೆಯಲ್ಲಿ ಕುಂಠಿತಗೊಂಡಿರುವ ಮಕ್ಕಳನ್ನು ಕುಂಠಿತ ಮುಕ್ತ ಅಥವಾ ನ್ಯೂನ್ಯತೆಯಿಂದ ಮುಕ್ತಗೊಳಿಸುವ ಕಾರ್ಯಸಾಧನೆ ನಿಜಕ್ಕೂ **ಮನುಕುಲಕ್ಕೆ ಒಂದು ಹೊಸ ಬದಲಾವಣೆಯ ಹೆಜ್ಜೆಯಾಗಿದೆ**. ಈ ದಾರಿಯುದಕ್ಕೂ ಸೇವಾ ಸಂಗಮ ಸಂಸ್ಥೆಗೆ ನಮ್ಮ ಬೆಂಬಲ ಸದಾ ಇರುತ್ತದೆ ಎಂದು ನೂಡಿದರು. ಈ ಸಂಧರ್ಭದಲ್ಲಿ ಫಾದರ್ ವಿಕ್ಟರ್ ವಾಸ್ ನಿರ್ದೇಶಕರು ಸೇವಾ ಸಂಗಮ ಸಂಸ್ಥೆ ಕಲಬುರುಗಿ ಇವರು ಮಾತನಾಡಿ ನಮ್ಮ ಸಂಸ್ಥೆಗೆ ತಾವು ನೀಡುತ್ತಿರುವ ಸಹಾಯ-ಸಹಕಾರ, ಬೆಂಬಲ ನಮಗೆ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಒಂದು ಹೊಸ ಶಕ್ತಿಯನ್ನು ನೀಡುತ್ತಿದೆ, ಆದ್ದರಿಂದ ನಿಮ್ಮ-ನಮ್ಮ ಸಂಬಂಧ ಹೀಗೆ ಮುಂದುವರೆಯಲ್ಲಿ. ಈ ಗ್ರಾಮದ ಬೇಳವಣಿಗೆಯಲ್ಲಿ ಕುಂಠಿತಗೊಂಡಿರುವ ಮಕ್ಕಳನ್ನು ಗುರುತಿಸಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಮೂಲಕ ಅವರ ಅಭಿವೃದ್ಧಿಗಾಗಿ ಇನ್ನೂ ಹೆಚ್ಚಿನ ಕಾರ್ಯವನ್ನು ಮಾಡೋಣ ಎಂದರು. ಮೌಲ್ಯಮಾಪನ ಸೆಭೆಯಲ್ಲಿ ಗ್ರಾಮದ ಯುವ ಮುಖಂಡರು ಶರಣು ಫರಹತಬಾದ್, ಶ್ರೀಮತಿ ಶ್ವೇತ ಯೋಜನಾ ವ್ಯವಸ್ಥಾಪಕರು ಹಾಗೂ ಕಾರ್ಯಕರ್ತರಾದ ಶ್ರೀ ರಾಜಕುಮಾರ ದೇವರಮನಿ ಉಪಸ್ಥಿತರಿದ್ದರು.



## "ಕತ್ತಲಿಂದ ಬೆಳಕಿನೆಡೆಗೆ" : ಇಂದ್ರ ಶರ್ಮ



ಕಲಬುರುಗಿ: ಸೇವಾ ಸಂಗಮ ಸಂಸ್ಥೆಯ ಮೂಲಕ ತಾಲ್ಲೂಕಿನ ಫರಹತಬಾದ್ ಗ್ರಾಮದಲ್ಲಿ ಕಳೆದ ಒಂದು ವರ್ಷದಿಂದ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಜಾರಿಯಲ್ಲಿದ್ದು, ಈ ಯೋಜನೆಯ ಮೌಲ್ಯಮಾಪನವನ್ನು ಮಾರ್ಚ್ 22.2024 ರಂದು ಅಜೀಂ ಪ್ರೇಮಜಿ ಫೌಂಡೇಶನ್ ಕಲಬುರಗಿ ಪ್ರತಿನಿಧಿಗಳಿಂದ ಮಾಡಲಾಯಿತು. ಮೌಲ್ಯಮಾಪನ ಅಧಿಕಾರಿಗಳಾದ ಶ್ರೀ ಜಗನ್ನಾಥ್ ಹಾಗೂ ಶ್ರೀ ಮಹಾದೇವಪ್ಪಾ ಮೂಲ್ಗೆ ಕಲಬುರಗಿ ಜಿಲ್ಲಾ ಸಂಯೋಜಕರು ಇವರು ಯೋಜನೆಯ ಕಾರ್ಯ ವ್ಯಾಪ್ತಿಯಲ್ಲಿ ಬ ರುವ ಗ್ರಾಮಗಳ ಅಂಗನವಾಡಿ ಕಾರ್ಯಕರ್ತೆರು, ಆಶಾ ಕಾರ್ಯಕಾರ್ಯಕರ್ತೆಯರು ಹಾಗೂ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಪಾಲಕರನ್ನು ಭೇಟಿ ಮಾಡುವ ಮೂಲಕ ಯೋಜನೆ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಇಂದ್ರ ಅಂಗನವಾಡಿ ಕಾರ್ಯಕರ್ತೆ ಫರಹತಬಾದ್ ಇವರು ಮಾತನಾಡಿದರು. ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕಾರ್ಯಕರ್ತರಾದ ಶ್ರೀ ರಾಜಕುಮಾರ ಅವರು ಬೇಳವಣಿಗೆಯಲ್ಲಿ ಕುಂಠಿತಗೊಂಡಿರುವ ಮಕ್ಕಳ ಮನೆ ಬಾಗಿಲಿಗೆ ಬಂದು ಉತ್ತೇಜಕ ಚಟುವಟಿಕೆಯನ್ನು ನೀಡುವ ಮೂಲಕ ಪಾಲಕರಿಗೆ ಮತ್ತು ಮಕ್ಕಳಿಗೆ ಆತ್ಮ ಸ್ಥೈರ್ಯವನ್ನು ನೀಡುತ್ತಿದ್ದಾರೆ, ತಮ್ಮ ಮಕ್ಕಳ ಭವಿಷ್ಯ ಕತ್ತಲಿನಲ್ಲಿದೆ ಎಂದುಕೊಂಡ ಪಾಲಕರಿಗೆ ಹೊಸ ಬೆಳಕನ್ನು ಒದಗಿಸುವ ಕಾರ್ಯ ಮಾಡುತ್ತಿದ್ದಾರೆ, ಮಕ್ಕಳು ಚಟುವಟಿಕೆಯ ಮೂಲಕ ಬದಲಾವಣೆಯನ್ನು ಕಾಣುತ್ತಿದ್ದಾರೆ ಹಾಗೂ ಅವರನ್ನು ಶೀಘ್ರವಾಗಿ ಪತ್ತೆ ಹಚ್ಚಲು ಸಹಕಾರಿಯಾಗಿದೆ. ಇಂತಹ ಉತ್ತಮ ಕಾರ್ಯಕ್ರಮವನ್ನು ನಮ್ಮ ಗ್ರಾಮದಲ್ಲಿ ಕಾರ್ಯರೂಪಕ್ಕೆ ತಂದಿರುವುದು ನಮಗೆ ಸಂತೋಷದ ವಿಷಯವಾಗಿದೆ. ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತರು ಪ್ರಾರಂಭದಲ್ಲಿ ಈ ವಿಷಯದ ಕುರಿತು ನಮಗೆ ಹೇಳಿದಾಗ ನಾವು ನಂಬಲಿಲ್ಲ ಆದರೆ ಈಗ ಮಕ್ಕಳಲ್ಲಿ ಆಗುತ್ತಿರುವ ಬದಲಾವಣೆಯನ್ನು ಕಂಡು ಆಶ್ಚರ್ಯವಾಗುತ್ತಿದೆ. ನಾವು ಈ ಕಾರ್ಯಕ್ರದಲ್ಲಿ ಅವರೊಂದಿಗೆ ಸಹಾಯ ಸಹಕಾರವನ್ನು ನೀಡುತ್ತಾ ಅವರೋಂದಿಗೆ ಇದ್ದೆವೆ ಎನ್ನುವುದೆ ಒಂದು ಹೆಮ್ಮೆಯ ವಿಷಯ ಎನಿಸುತ್ತದೆ ಎಂದರು. ಶ್ರೀಮತಿ ಗೌಸಿಯಾ ಶಹಾ ಬೇಗಂ ಇವರು ಮಾತನಾಡಿ ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ರಾಜಕುಮಾರ ಮೊದಲ ಬಾರಿಗೆ ಅಂಗನವಾಡಿ ಕೇಂದ್ರಕ್ಕೆ ಭೇಟಿ ಮಾಡಿದಾಗ, ಅವರು ನನ್ನ ಮಗಳನ್ನು ನೋಡಿ ಅವಳ ಬೇಳವಣಿಗೆಯ ಕುರಿತು ಮಾತಾಡಿದ ಮಾತುಗಳು ಕೇಳಿ ನನಗೆ ಅನಿಸಿತ್ತು



ನನ್ನ ಮಗಳ ಬೆಳವಣಿಗೆಯ ಮೇಲೆ ನನಗೆ ಇಲ್ಲದ ನಂಬಿಕೆ, ಅವರಿಗೆ ಇಷ್ಟೊಂದು ನಂಬಿಕೆ ಇದೆ ಎಂದು, ನಂತರ ಅವರು ನಮ್ಮ ಮನೆಗೆ ಬಂದು ನನ್ನ ಮಗಳಾದ ಅಮೀನಾ ಶಹಾಗೆ ಕೆಲವೊಂದು ಚಟುವಟಿಕೆಗಳನ್ನು ನನ್ನ ಮುಂದೆ ಮಾಡಿದರು, ಅದಕ್ಕೆ ನನ್ನ ಮಗಳು ಸಹಕರಿಸಿದಳು ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು, ಅವರು ಈ ಚಟುವಟಿಕೆಯನ್ನು ತಾವು ಮನೆಯಲ್ಲಿ ಸಮಯವಿದ್ದಾಗ ತಮ್ಮ ಮಗಳಿಗೆ ಮಾಡಿಸುತ್ತಾ ಬನ್ನಿ ಎಂದು ಹೇಳಿದರು. ಹಿಗೆ ಪ್ರತಿ ವಾರಕ್ಕೋಮ್ಮೆ ನಮ್ಮ ಮನೆಗೆ ಬಂದು ವಿವಿಧ ರೀತಿಯ ಚಟುವಟಿಕೆಗಳನ್ನು ನನ್ನ ಮಗಳಿಗೆ ಹಾಗು ನನಗು ಕಲಿಸಿದರು. ನಾನು ಪ್ರತಿದಿನ ಅದನ್ನು ಮಾಡಿಸುತ್ತ ಬಂದೆ ಇದ್ದರಿಂದಾಗಿ ನನ್ನ ಮಗಳು ಬದಲಾಗುತ್ತಾಳೆ ಎಂಬ ನಂಬಿಕೆ ನನಲ್ಲಿ ಮೂಡಿದೆ ಎಂದು ಹೇಳಿದರು.

## "ಚೇತನ ಕೇಂದ್ರದಲ್ಲಿ ಒಂದು ವರ್ಷದ ಮೌಲ್ಯಮಾಪನ ಸಭೆ"



ಮಾರ್ಚ್ 23.2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜೀ ಫೌಂಡೇಶನ ಸಂಯುಕ್ತಾಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು ಒಂದು ವರ್ಷದ ಮೌಲ್ಯಮಾಪನ ಸಭೆ ಕಲಬುರಗಿ ಜಿಲ್ಲೆಯ ಚೇತನ ಕೇಂದ್ರದಲ್ಲಿ ಹಮ್ಮಿಕೊಳಿಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ 22 ಮಕ್ಕಳು ಹಾಗು ಪಾಲಕರು ಭಾಗವಹಿಸಿದರು. ಮೌಲ್ಯಮಾಪನ ಅಧಿಕಾರಿಯಾದ ಶ್ರೀ ಜಗನ್ನಾಥ, ನ್ಯಾಶನಲ್ ಪ್ರೋಗ್ರಾಮನ್ ಹೆಡ್ ಶ್ರೀ ಅನಿಶ್ ಮಹದೇವ್ ಹಾಗೂ ಸ್ಟೇಟ್ ಪ್ರೋಗ್ರಾಮ್ ಹೆಡ್ ಶ್ರೀ ರುದ್ರೇಶ್ ಹಾಗೂ ಜಿಲ್ಲಾ ಸಂಯೋಜಕರಾದ ಮಹದೇವಪ್ಪ ಅಜೀಂ ಪ್ರೇಮಜೀ ಫೌಂಡೇಶನ್ ಕಲಬುರಗಿ ಅವರು ಬೆಳವಣಿಗೆಯಲ್ಲಿ ಕುಂಠಿತವಿರುವ ಪಾಲಕರ ಜೊತೆ ಮಕ್ಕಳ ಬದಲಾವಣೆ ಕುರಿತು ಚರ್ಚಿಸಿದರು, ಜೊತೆಗೆ ಹಲವಾರು ಪಾಲಕರಿಗೆ ಸಲಹೆ ಸೂಚನೆಗಳು ನೀಡಿದರು. ಪಾಲಕರು ಈ ಕಾರ್ಯಕ್ರಮದಿಂದ ಮಕ್ಕಳಿಗೆ ಭವಿಷ್ಯದಲ್ಲಿ ಉತ್ತಮ ಜೀವನ ನಡೆಸಲು ಸಹಾಯವಾಗಲಿದೆ ಎಂದರು. ಈ ಸಭೆಯಲ್ಲಿ ಕಾರ್ಯಕರ್ತೆಯರು ಸೇವಾಸಂಗಮ ಸಂಸ್ಥೆಯ ನಿರ್ದೇಶಕರಾದ ಫಧರ್ ವಿಕ್ಟರ್ ವಾಸ್, ಸಹ ನಿರ್ದೇಶಕರಾದ ಫಾಧರ್ ದೀಪಕ್ ಯೋಜನಾ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಉಪಸ್ಥಿತರಿದ್ದರು.



## "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ"



ಕಲಬುರಗಿ: ನಗರದಲ್ಲಿರುವ ಕನ್ನಡ ಭವನದಲ್ಲಿ ಸೇವಾ ಸಂಗಮ ಸಂಸ್ಥೆ ವತಿಯಿಂದ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪೂಜ್ಯ ಧರ್ಮಾಧ್ಯಕ್ಷರಾದ ರಾಬರ್ಟ್ ಮಿರಾಂದಾ, ಧರ್ಮಾಧ್ಯಕ್ಷರು ಕಲಬುರಗಿ ಧರ್ಮಕ್ಷೇತ್ರ. ಸಾನಿಧ್ಯ ವಂದನಿಯ ಫಾದರ್ ಜೋಸೆಫ್ ಪ್ರವಿಣ್ ಪ್ರಧಾನ ಗುರುಗಳು ಸೇಂಟ್ ಮೇರಿಚರ್ಚ್ ಕಲಬುರಗಿ, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ಲಕ್ಷ್ಮೀ ದತ್ತಾತ್ರೇಯ ಪಾಟೀಲ್ ಸಮಾಜ ಸೇವಕರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಸ್ಟರ್ ಪಿಲೋಮಿನಾ ಮಿನಜೆಸ್ ಮುಖ್ಯೋಪಾಧ್ಯಾಯಿಣಿ ಸೇಂಟ್ ಮೇರಿಸ್ ಸ್ಕೂಲ್, ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಮತಿ ಲಕ್ಷ್ಮೀದತ್ತಾತ್ರೇಯ ಪಾಟೀಲ್ ಸಮಾಜ ಸೇವಕರು ಇವರು ಮಹಿಳೆಯರಿಗೂ ಸಮಾನ ಸ್ಥಾನಮಾನ ಸಿಗಬೇಕು ಎಂಬುದು ಅಂತರಾಷ್ಟ್ರೀಯ ಮಹಿಳಾ ದಿನದ ಉದ್ದೇಶವಾಗಿದೆ. ಮಹಿಳಾ ಸಬಲೀಕರಣದ ಮಹತ್ವ ಸಾರಲು, ಲಿಂಗ ಪಕ್ಷಪಾತ ಮುಕ್ತ ಸಮಾಜವನ್ನು ನಿರ್ಮಿಸಲು, ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಕೊಡುಗೆಯನ್ನು ಸ್ಮರಿಸಲು, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ನಿಂದನೆಯನ್ನು ತಡೆಯಲು ಜಾಗೃತಿ ಮೂಡಿಸಲು ಮತ್ತು ಮಹಿಳೆಯರ ಸಮಾನ ಹಕ್ಕುಗಳನ್ನು ಪ್ರತಿಪಾದಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಪ್ರಸ್ತುತ ಸಮಯದಲ್ಲಿ ಮಹಿಳೆಯರು ಸಮಾಜದಲ್ಲಿರುವ ಪ್ರತಿಯೊಂದು ಕ್ಷೇತ್ರದಲ್ಲಿ ತನ್ನ ಕಾರ್ಯಪ್ರವೃತಿಯ ಮೂಲಕ ಸಾಧನೆಯ ಶಿಖರವನ್ನು ಹತ್ತುತ್ತಿದ್ದಾಳೆ ಜೊತೆಗೆ ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಸಮಾಜಕ್ಕೆ ಮಾದರಿಯಾಗಿದ್ದಾರೆ ಇದರ ನಡುವೆ ಮಹಿಳೆಯರು ತಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸುವಂತಾಗಬೇಕು ಎಂದು ಹೇಳಿದರು.



ಕಾರ್ಯಕ್ರಮದ ಸಾನಿಧ್ಯ ವಹಿಸಿದ ಬಿಷಪ್ ರಾಬರ್ಟ್‌ರವರು ಮಾತನಾಡಿ "ರಾಷ್ಟ್ರಗಳ ಉಳಿವು-ಅಳಿವು ಹಾಗೂ ಏಳಿಗೆ ಅರಿಯಬೇಕಾದರೆ ಆ ರಾಷ್ಟ್ರದಲ್ಲಿ ಮಹಿಳೆಯ ಸ್ಥಾನ ಮಾನದ ಕುರಿತು ಅಧ್ಯಯನ ಮಾಡಿ ಆ ರಾಷ್ಟ್ರವು ಯಾವ 'ಅಂಚಿನಲ್ಲಿದೆ ಎಂದು ಹೇಳಬಹುದು. ನಾವು ತಿಳಿಯಬೇಕಾದದ್ದು ಏನೆಂದರೆ ಮಹಿಳೆಯ ಪಾತ್ರ ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರಮುಖವಾಗಿದೆ ಎಂದು ಹೇಳೀದರು. ನ್ಯಾಯವಾದಿ ಶ್ರೀಮತಿ ಅಶ್ವಿನಿ ಮದನಕರ ಮಾತನಾಡಿ ಒಂದು ದೇಶದ ಪ್ರಗತಿಯನ್ನು ಆ ದೇಶದ ಮಹಿಳೆಯ ಪ್ರಗತಿಯಿಂದ ಅಳೆಯುತ್ತೇವೆ ಮಹಿಳೆಯರು ಸಂಘಟನೆಯಲ್ಲಿ ಹೆಚ್ಚು ನಂಬಿಕೆ ಅವರು ಮನಸ್ಸು ಮಾಡಿದರೆ ಒಂದು ಸಮಾಜವನ್ನು ಬದಲಿಸಬಲ್ಲರು ಎಂದು ಹೇಳಿದರು. ಮಹಿಳೆಯರ ಆರೋಗ್ಯದ ಕುರಿತು ಹೆಚ್ಚಿನ ಮಹತ್ವ ನೀಡುವ ಸಂಬಂಧ ಮಹಿಳೆಯರಿಗೆ ಹೆರಿಗೆ ಭತ್ಯೆ, ಮೇಟರನೇಟಿ ವ್ಯಾಟ್ ಕಾಯಿದೆ, ಇವೆಲ್ಲವೂ ಕೂಡ ಮಹಿಳೆಯರಿಗೆ ಇರುವ ಹಕ್ಕುಗಳಾಗಿವೆ ಎಂದು ತಿಳಿಸಿದರು. ಈ ಸಂದರ್ಭ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಒಂಭತ್ತು ಮಂದಿ ಮಹಿಳೆಯನ್ನು "ಮಾಹಿಳಾ ಸಾಧಕಿ" ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ಶ್ರೀ ಶರಣು ಪಪ್ಪಾ, ಶ್ರೀಮತಿ ತೃಪ್ತಿ ಶ್ರೀನಿವಾಸ ಲಾಖೆ, ಶ್ರೀಮತಿ ನೀಲಾಂಬಿಕಾ ಶೇರಿಕಾರ, ಡಾ. ಸಪ್ನ ಪಾಟಿಲ ಸ್ಲಂಜನಾಂದೋಲನ ಸಂಚಾಲಕಿ ಶ್ರೀಮತಿ ರೇಣುಕಾ ಸರಡಗಿ, ಫಾದರ್ ಸ್ಟ್ಯಾನಿ ಲೋಬೊ, ಫಾದರ್ ವಿನ್ಸೆಂಟ್ ಪಿರೇರಾ, ಫಾಧರ್ ದೀಪಕ್, ಕುಮಾರಿ ಮಹಾನಂದ ಸಿಂಗ, ಶ್ರೀಮತಿ ಲಕ್ಷ್ಮೀಕುಪೇಂದ್ರ ಮತ್ತಿತರು ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ಶ್ರೀಮತಿ ದಾಕ್ಷಯಣಿ ನಿರೂಪಿಸಿ, ಶ್ರೀಮತಿ ಸ್ವಾತಿ ಸ್ವಾಗತಿಸಿ, ಶ್ರೀಮತಿ ಶಿವಕಾಂತ ಅವರು ವಂದಿಸಿದರು.



# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯ

## ನೀರಿನ ಸಮಸ್ಯೆ ಬಗೆಹರಿಸುವಂತೆ ಮುಖ್ಯಾಧಿಕಾರಿಗೆ ಮನವಿ

ಭಾರತ ವೈಭವ ಸುದ್ದಿ



**ಹುಮನಾಬಾದ:** ನೀರಿನ ಸಮಸ್ಯೆ ಬಗೆ ಹರಿಸುವಂತೆ ಭಾರತೀಯ ದಲಿತ ಪ್ಯಾಂತರ ಸಂಘಟನೆ ವತಿಯಿಂದ ಪುರಸಭೆ ಮುಖ್ಯಾಧಿಕಾರಿಗಳಿಗೆ ಮನವಿ ಪತ್ರವನ್ನು ಗುರುವಾರ ಸಲ್ಲಿಸಲಾಗಿದೆ.ಪಟ್ಟಣದ ವಿವಿದ ಬಡಾಣೆಯಲ್ಲಿ ಸುಮಾರು ದಿವಸಗಳಿಂದ ನೀರಿನ ಸಮಸ್ಯೆ ಎದುರಾಗುತ್ತಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೂ ಕೂಡಾ ಸ್ಪಂದನೆ ನೀಡದೆ ನೀರಿಗಾಗಿ ಕ್ರಮ ಕೈಗೊಂಡಿಲ್ಲ, ಜನರು ನೀರಿಗಾಗಿ ಬಹಳ ತೊಂದರೆ ಅನುಭವಿಸುತ್ತಿದ್ದಾರೆ.ದಯಮಾಡಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು.ಉಪಾರಗಲ್ಲಿಯಲ್ಲಿ ಬೊರವೆಲ್ ಗಳಿದ್ದು ನೀರಿನ ಟಾಕಿ ಇಲ್ಲ, ತಾವುಗಳು ನೀರಿನ ಟಾಕಿ ಅಳವಡಿಸಿಕೊಡಬೇಕು ಮತ್ತು ಉಪಾರ ಓಣಿಯಲ್ಲಿ ನೀರಿನ ಪೈಪುಗಳನ್ನ ದುರಸ್ಥಿ ಮಾಡಿಸಿಕೊಡಬೇಕು.ಮರಿಗೆಮ್ಮಾ ದೇವಸ್ಥಾನದ ಹತ್ತಿರ ಒಂದು ಹೊಸದಾಗಿ ಬೊರವೆಲ್ ಕೊರೆಸಿ ನೀರಿನ ಟಾಕಿ ವ್ಯವಸ್ಥೆ ಮಾಡಿ ಸಮಸ್ಯೆ ಬಗೆ ಹರಿಸಬೇಕು.ಒಂದು ವೇಳೆ ಸಮಸ್ಯೆ ಬಗೆ ಹರಿಸದಿದ್ದಲ್ಲಿ ಬರುವ ದಿನಗಳಲ್ಲಿ ಪುರಸಭೆ ಕಾರ್ಯಾಲಯ ಎದುರುಗಡೆ ಧರಣಿ ಸತ್ಯಾಗ್ರಹ ಮಾಡಲಾಗುತ್ತದೆ ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.ಈ ಸಂದರ್ಭದಲ್ಲಿ ಭಾರತೀಯ ದಲಿತ ಪ್ಯಾಂತರ ಸಂಘಟನೆ ತಾಲೂಕಾ ಅಧ್ಯಕ್ಷ ಗಣಪತಿ ಅಷ್ಟೋರೆ ಉಪಾಧ್ಯಕ್ಷ ಷೀರಪ್ಪಾ ಪಡತಲ, ಅನೀಲಕುಮಾರ ಮಲ್ಲಶೆಟ್ಟಿ, ವಿಜಯಕುಮಾರ ಪಡತಲ, ಧನರಾಜ ಬರಲಾ, ದಶರಥ ಆರ್ಯ, ಶ್ರೀಕಾಂತ ಜಂಬಗಿ ಕಿಶೋರ ಸೂರ್ಯವಂಶಿ ಸೇರಿ ಅನೇಕ ಮಹಿಳೆಯರು ಭಾಗಿಯಾಗಿದ್ದರು.

## ಪ್ರತಿ ಕ್ಷೇತ್ರದಲ್ಲಿ ಮಹಿಳೆಯರು ಭಾಗವಹಿಸಬೇಕು: ಧರ್ಮಾಧ್ಯಕ್ಷರು

ಭಾರತ ವೈಭವ ಸುದ್ದಿ



**ಹುಮನಾಬಾದ:** ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆಯರು ಮುನ್ನುಗಬೇಕು ಎಂದು ಗುಲ್ಬರ್ಗ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರಾದ ಪರಮ ಪೂಜ್ಯ ಡಾ. ರಾಬರ್ಟ್ ಮೈಕಲ್ ಮಿರಂದ ಹೇಳಿದರು. ಪಟ್ಟಣದ ಆರ್ಬಿಟ್ ಸಂಸ್ಥೆಯಲ್ಲಿ ದಿನಾಂಕ 23-03-2024 ಶನಿವಾರ ಮಹಿಳಾ ಸಬಲೀಕರಣ ಯೋಜನೆಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿ ಮಾತನಾಡಿದರು. ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ಭಾಗವಹಿಸಿ ಸಬಲರಾಗಬೇಕು. ಆರ್ಬಿಟ್ ಸಂಸ್ಥೆ ಮಹಿಳೆಯರಿಗಾಗಿ ವಿವಿಧ ಚಟುವಟಿಕೆಗಳ ಮೂಲಕ ಅರಿವು ನೀಡುತ್ತಿರುವಾಗ ಅದರ ಸದುಪಯೋಗವನ್ನು ಪಡೆದುಕೊಂಡು ಜೀವನದಲ್ಲಿ ಮುಂದೆ ಸಾಗಬೇಕು ಎಂದು ಹೇಳಿದರು. ಬಳಿಕ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕಿ ಶ್ರೀಮತಿ ನಿರ್ಮಲ, ಮಹಿಳೆಯರ ಏಳಿಗೆಗಾಗಿ ಸಂಸ್ಥೆಯು ಮಾಡುವಂತಹ ಕೆಲಸಗಳ ಕುರಿತು ಮಹಿಳೆಯರು ಆರ್ಥಿಕ ಸಬಲೀಕರಣ ರಾಗುವುದರೊಂದಿಗೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕವಾಗಿಯೂ ಸಹ ಮುಂದುವರಿಯಬೇಕು ಎನ್ನುವುದೇ ಸಂಸ್ಥೆಯ ಉದ್ದೇಶವಾಗಿದೆ ಎಂದು ಪ್ರಾಸ್ತಾವಿಕವಾಗಿ ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದಂತಹ ಜನಶಕ್ತಿ ತಾಲೂಕ ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ ಸಂಗೀತಮಾತನಾಡಿ, ನಾನು ಇಷ್ಟೊಂದು ಬೆಳೆಯಬೇಕಾದರೆ ಆರ್ಬಿಟ್ ಸಂಸ್ಥೆಯೇ ಕಾರಣ, ನಾನು ಬೆಳೆದಂತೆ ತಾವೆಲ್ಲರೂ ಬೆಳೆದು ಮುಂದೊಂದು ದಿನ ಈ ವೇದಿಕೆಯಲ್ಲಿ ತಾವುಗಳು ಸಹ ಕಾಣುವಂತಾಗಬೇಕು ಎಂದು ಕರೆ ಕೊಟ್ಟರು. ಸಂಪನ್ಮೂಲ ವ್ಯಕ್ತಿ ವಕೀಲರಾದ ಮಂಜುಳಾ ಪಂಚಾಳ ಮಾತನಾಡುತ್ತಾ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಧ್ಯೇಯ ವಾಕ್ಯವಾದ ಆರ್ಥಿಕ ಸಬಲೀಕರಣದೊಂದಿಗೆ ಲಿಂಗ ಸಮಾನತೆ ಎನ್ನುವುದರ ಕುರಿತು ಕುಟುಂಬದಲ್ಲಿ ಗಂಡು ಹೆಣ್ಣು ಸಮಾನರು ಇಬ್ಬರಲ್ಲಿ ಯಾರು ಮೇಲು ಕೀಳು ಅಲ್ಲ. ಏಕೆಂದರೆ ಜೀವನವನ್ನು ನಡೆಸಲು ಇಬ್ಬರ ಸತತ ಪ್ರಯತ್ನವಾಗಿರುತ್ತದೆ. ನಾವಿಬ್ಬರು ಒಂದೇ ಎನ್ನುವ ಮನೋಭಾವನೆಯನ್ನು ಇಟ್ಟುಕೊಂಡರೆ ಯಾವುದೇ ತಾರತಮ್ಯಗಳು ಉಂಟಾಗುವುದಿಲ್ಲ ಎಂದು ತಿಳಿಸಿದರು. ಮಹಿಳಾ ಸಬಲೀಕರಣ ಯೋಜನೆಯ ರಾಜ್ಯ ಸಂಯೋಜಕರಾದ ಶ್ರೀಮತಿ ಲೈನ, ಹಲವಾರು ಸಾಧಕಿಯರ ಸತತ ಪ್ರಯತ್ನದ ಫಲವಾಗಿ ವಿಶ್ವದಾದ್ಯಂತ ಮಾರ್ಚ್ 8 ರಂದು ಮಹಿಳಾ ದಿನಾಚರಣೆಯನ್ನು ಹೆಮ್ಮೆಯಿಂದ ಆಚರಿಸಲು ಅವಕಾಶವನ್ನು ಒದಗಿಸಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ. ಇಷ್ಟೊಂದು ಸಂಖ್ಯೆಯಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸ್ವಸಹಾಯ ಸಂಘದ ಪ್ರತಿನಿಧಿಗಳು ಒಗ್ಗೂಡಿ ಮಹಿಳಾ ದಿನಾಚರಣೆಯ ಕುರಿತು ಎಷ್ಟರ ಮಟ್ಟಿಗೆ ತಿಳಿದುಕೊಂಡಿದ್ದೀರಾ ಎಂಬುದು ಗೊತ್ತಾಗುತ್ತದೆಎಂದರು. ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ಮತದಾನ ಚಲಾಯಿಸುವುದು ತಮ್ಮೆಲ್ಲರ ಆದ್ಯ ಕರ್ತವ್ಯವಾಗಿದ್ದು, ಇದು ನಿಮ್ಮ ಹಕ್ಕು, ನೀವು ಭಾರತೀಯ ಪ್ರಜೆಗಳು, ಕಷ್ಟಕ್ಕೆ ಸ್ಪಂದಿಸುವ ಜನನಾಯಕರನ್ನು ಆರಿಸಿರಿ. ಯಾವ ಕಾರಣಕ್ಕೂ ಹಣಕ್ಕಾಗಿ ವೋಟ್ ಮಾರಿಕೊಳ್ಳಬೇಡಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಾಧನೆಗೈದ ಮಹಿಳೆಯರನ್ನು ಸನ್ಮಾನಿಸುವುದರೊಂದಿಗೆ ಕಾರ್ಯಕ್ರಮದಲ್ಲಿ ಮಹಿಳೆಯರ ಕೋಲಾಟ, ಜಾನಪದ ಗೀತೆ, ಪ್ರಾರ್ಥನೆ ನೃತ್ಯ ಹಾಗೂ ಸೆಂಟ್ ಮೇರಿಸ್ ಆಂಗ್ಲ ಮಾಧ್ಯಮ ಶಾಲೆ ಗಾಂಧಿನಗರ ಮಕ್ಕಳಿಂದ ಬ್ರೂಣ ಲಿಂಗ ಪತ್ತೆ ಕಿರು ನಾಟಕದೊಂದಿಗೆ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತ್ತು. ಫಾದರ್ ವಿಜಯ್ ಕುಮಾರಸ್ವಾಮಿ ಎಲ್ಲಾ, ಫಾದರ್ ಸುನಿಲ್ ಮಾನ್ಸಾರೆ, ಫಾದರ್ ಜಾರ್ಜ್ ಫಾದರ್, ಸುಜಿನ್ ಬ್ರದರ್, ಫ್ರಾನ್ಸಿಸ್ ಶ್ರೀಮತಿ ಲಕ್ಷ್ಮಿ, ಸಿಸ್ಟರ ಸ್ಟೆಲ್ಲಾ ಮರಿಯ ಸೇರಿದಂತೆ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು, ಸ್ವಸಹಾಯ ಸಂಘಗಳ ಸದಸ್ಯರುಗಳು ಉಪಸ್ಥಿತರಿದ್ದರು.

## ಆರ್ಬಿಟ್ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ

ಭಾರತ ವೈಭವ ಸುದ್ದಿ



**ಚಿಟ್ಗುಪ್ಪ:** ತಾಲೂಕಿನ ಶಾಮತಬಾದ ಗ್ರಾಮದಲ್ಲಿ ದಿನಾಂಕ 13-3-2024 ಬುಧವಾರ ಆರ್ಬಿಟ್ ಸಂಸ್ಥೆ ಹುಮ್ನಾಬಾದ,ಇಂಡಿಯನ್ ಕ್ಯಾನ್ಸರ್ ಸೊಸೈಟಿ ಗುಲ್ಬರ್ಗ ಹಾಗೂ ವೆಲ್ಮಗ್ನ ಆಸ್ಪತ್ರೆ ಬೀದರ್ ಇವರ ಸಹಯೋಗದೊಂದಿಗೆ ಉಚಿತ ಕ್ಯಾನ್ಸರ್ ಶಿಬಿರ ಹಾಗು ಉಚಿತ ಕಣ್ಣಿನ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿತ್ತು.ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಪ್ರಾದೇಶಿಕ ಮುಖ್ಯಸ್ಥರಾದ ಗುರುರಾಜ್ ಕುಲಕರಣಿಯವರು ಮಾತಾಡಿ.ತಂಬಾಕು,ಬೀಡಿ,ಸಿಗ್ರೆಟ್ ಸೇದುವುದರಿಂದ ಹಾಗೂ ಅತಿಯಾದ ರಾಸಾಯನಿಕ ಗೊಬ್ಬರ ಇರುವ ಆಹಾರ ಸೇವನೆ ಮಾಡುವುದರಿಂದ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ.ಕ್ಯಾನ್ಸರ್ ಬಂದರೆ ಭಯಪಡುವ ಅವಶ್ಯಕತೆಯಿಲ್ಲ.ಚಿಕಿತ್ಸೆ ಪಡೆಯುವುದರ ಜೊತೆಗೆ ಗುಣಮುಖರಾಗಬಹುದು.ಹೀಗಾಗಿ ಶಿಬಿರದ ಸದುಪಯೋಗವನ್ನು ಪಡೆದುಕೊಂಡು ತಾವೆಲ್ಲರೂ ಪರಿಶೀಲನೆ ಮಾಡಿಸಿಕೊಳ್ಳಿ ಎಂದು ತಿಳಿಸಿದರು. ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯ್ ಕುಮಾರ ಮಾತಾಡಿ.ಆರೋಗ್ಯವೇ ಭಾಗ್ಯ ಎಂಬಂತೆ ಆರ್ಬಿಟ್ ಸಂಸ್ಥೆಯು ಸುಮಾರು 30 ವರ್ಷಗಳಿಂದ ಜನರ ಸೇವೆಯಲ್ಲಿ ತೊಡಗಿ ಹಲವಾರು ಉಚಿತವಾದ ಆರೋಗ್ಯ ಶಿಬಿರವನ್ನು ನಡೆಸುತ್ತಾ ಅನೇಕ ಜನರ ಬಾಳಿಗೆ ಬೆಳಕಾಗಿದೆ.ಈ ಶಿಬಿರದ ಉಪಯೋಗವನ್ನು ತಾವೆಲ್ಲರೂ ಪಡೆದುಕೊಂಡು ಒಳ್ಳೆಯ ಆರೋಗ್ಯವಂತರಾಗಿ ಬಾಳಿ ಎಂದು ಹೇಳಿದರು.ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಕಾರ್ಯದರ್ಶಿ ನಂದಕುಮಾರ ಸದಸ್ಯರಾದ ಸೂರ್ಯಕಾಂತ ವಾಗ್ದಳಿ,ಗ್ರಾಮದ ಮುಖಂಡರಾದ ಅಜಿಮೋದ್ದಿನ ಬಿರಾದಾರ್, ಹನುಮಂತರಾವ್,ಪ್ರಾಥಮಿಕ ಆರೋಗ್ಯ ಕೇಂದ್ರದ ಲತೀಫ್ ಸಿಎಚ್ಓ ಶ್ರೀಮತಿ ಕಸ್ತೂರಿಬಾಯಿ,ಪಿ ಹೆಚ್ ಸಿ ಓ ವೆಲ್ಮಗ್ನ ಆಸ್ಪತ್ರೆಯ ಶ್ರೀಮತಿ ಸುಮಾ ಹಾಗೂ ಶ್ರೀ ಜೈವಂತ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆಯಾರಾದ ಶ್ರೀಮತಿ ಸವಿತಾ,ಅಮಿತಾ ಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಅರುಣಕೋಟೆ ಕಾರ್ಯಕರ್ತರಾದ ಹಣಮಂತ,ಆಶಾ ಕಾರ್ಯಕರ್ತರಾದ ಕವಿತಾ,ಜೈಶ್ರೀ ಸೇರಿ ಗ್ರಾಮಸ್ಥರು ಉಪಸ್ಥಿತರಿದ್ದರು.

### ಬೀದರ್ 3



ಹುಮನಾಬಾದ್ ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ದೀಪ ಬೆಳಗಿಸುವ ಮೂಲಕ ಫಾದರ್ ಮೈಕೆಲ್ ಮಿರಂಡಾ ಚಾಲನೆ ನೀಡಿದರು

## ‘ಮಹಿಳೆಯರು ಆರ್ಥಿಕವಾಗಿ ಸಬಲರಾಗಲಿ’

ಪ್ರಜಾವಾಣಿ ವಾರ್ತೆ

**ಹುಮನಾಬಾದ್:** ‘ಕಳೆದ 30 ವರ್ಷಗಳಿಂದ ಜಿಲ್ಲೆಯ ಮಹಿಳೆಯರ ಸಬಲೀಕರಣಕ್ಕಾಗಿ ಆರ್ಬಿಟ್ ಸಂಸ್ಥೆಯು ಶ್ರಮವಹಿಸುತ್ತಿದೆ’ ಎಂದು ಸಂಸ್ಥೆಯ ಮಹಿಳಾ ಅಭಿವೃದ್ಧಿ ಯೋಜನೆ ಸಂಯೋಜಕಿ ನಿರ್ಮಲಾ ತಿಳಿಸಿದರು.

ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ‘ಮಹಿಳೆಯು ಸಮಾಜದಲ್ಲಿ ಪುರುಷರ ಸಮಾನವಾಗಿ ಧೈರ್ಯದಿಂದ ಬದುಕಬೇಕು’ ಎಂದು ಹೇಳಿದರು.

ಫಾದರ್ ಮೈಕಲ್ ಮಿರಂಡಾ ಮಾತನಾಡಿ, ‘ಇಂದಿನ ಆಧುನಿಕ ಯುಗದಲ್ಲಿ ಮಹಿಳೆಯರು ಸಬಲರಾಗುವುದು ಅವಶ್ಯಕ. ಮಹಿಳೆಯರು ನಾಯಕತ್ವದ ಗುಣ ಬೆಳೆಸಿಕೊಳ್ಳಬೇಕು. ತಮ್ಮ ಹಕ್ಕುಗಳನ್ನು ಪಡೆಯಲು ಮುಂದೆ ಬರಬೇಕು. ಹೋರಾಡಬೇಕು ಎಂದರು.

ಫಾದರ್ ವಿಕ್ಟರ್ ವಾಸ್ ಮಾತನಾಡಿ, ಸಮಾಜದಲ್ಲಿ ದಿನದಿಂದ ದಿನಕ್ಕೆ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಮತದಾನದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ರಾಜಕೀಯ ನಾಯಕರ ವ್ಯಾಮೋಹಕ್ಕೆ ಮಹಿಳೆಯರು ಒಳಗಾಗಬಾರದು ಎಂದರು.

ಮಹಿಳೆಯರು ಕೋಲಾಟ, ನೃತ್ಯ, ಹಾಗೂ ಶಾಲಾ ಮಕ್ಕಳಿಂದ ಭ್ರೂಣ ಹತ್ಯೆ ತಡೆ ಕಿರು ನಾಟಕ ಪ್ರದರ್ಶನ ಮಾಡಲಾಯಿತು.

ಭಾಗ್ಯಶ್ರೀ ಪಾಟೀಲ, ರೇಖಾ ಪಾಟೀಲ, ಲಕ್ಷ್ಮಿ, ಮಂಜುಳಾ ಪಂಚಾಳ, ಜಾನಕಿ ವನಿತಾ, ಶಾಂತಾಬಾಯಿ, ಸೂರ್ಯಕಾಂತ್ ಸೇರಿದಂತೆ ಇತರರು ಹಾಜರಿದ್ದರು.

ಸಂಯುಕ್ತ ಕರ್ನಾಟಕ
SAMYUKTA KARNATAKA
ಕನ್ನಡಿಗರ ನಾಡಿಪತ್ರಿಕೆ

## ‘ಓಟನ್ನು ನೋಟಿಗಾಗಿ ಮಾರಿಕೊಳ್ಳಬೇಡಿ’

**ಸಂ.ಕ.ಸಮಾಚಾರ ಹುಮನಾಬಾದ :** ಓಟನ್ನು ಎಂಥದ್ದೇ ಪ್ರಸಂಗ ಬಂದರೂ ನೋಟಿಗಾಗಿ ಮಾರಿಕೊಳ್ಳಬೇಡಿ ಎಂದು ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಸಲಹೆ ನೀಡಿದರು.

ಇಲ್ಲಿಯ ಆರ್ಬಿಟ್ ಸಂಸ್ಥೆಯಲ್ಲಿ ಆಯೋಜಿಸಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸಾಧಕ ಮಹಿಳೆಯರನ್ನು ಸನ್ಮಾನಿಸಿ ಮಾತನಾಡಿ ಮತ ಅಮೂಲ್ಯ, ಸಂವಿಧಾನ ಕೊಟ್ಟ ಅತ್ಯಂತ ಶ್ರೇಷ್ಠವಾದ ಏಕೈಕ ಹಕ್ಕು ಅದು. ಅದನ್ನು ನೋಟಿಗಾಗಿ ಮಾರಿಕೊಳ್ಳುವುದು ನಮ್ಮನ್ನೇ ನಾವು ಮಾರಿಕೊಂಡಂತೆ. ಈ ನಿಟ್ಟಿನಲ್ಲಿ ಅತ್ಯಂತ ಜಾಗೃತರಾಗಬೇಕು. ರಾಷ್ಟ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿವವರನ್ನು ಗುರುತಿಸಿ, ನಿಮ್ಮ ಆತ್ಮಸಾಕ್ಷಿಗೆ ಬದ್ಧವಾಗಿ ಮತಚಲಾಯಿಸಬೇಕು.

ಎಷ್ಟೇ ಒತ್ತಡದ ಕೆಲಸವಿದ್ದರೂ ಮತದಾನ ಹಕ್ಕು ಚಲಾಯಿಸಿಯೇ ಹೋಗ್ಬೇಕು. ರಜಾ ದಿನಗಳೆಂಬ ಕಾರಣಕ್ಕಾಗಿ ಪ್ರವಾಸ ಇತ್ಯಾದಿಗಾಗಿ ಪರಿವಾರ ಸಮೇತ ತೆರಳುವುದಾದರೆ ಬೆಳಗ್ಗೆ ಮತದಾನ ಪ್ರಕ್ರಿಯೆ ಆರಂಭಗೊಂಡ ತಕ್ಷಣ ಮತದಾನ ಹಕ್ಕು ಚಲಾಯಿಸಿಯೇ ಮುಂದಿನ ಕೆಲಸಕ್ಕೆ ಕೈಹಾಕಬೇಕೆಂದು ಮನವಿ ಮಾಡಿದರು. ಜನಶಕ್ತಿ ಒಕ್ಕೂಟ ಅಧ್ಯಕ್ಷೆ ಸಂಗೀತಾ ಮಾತನಾಡಿದರು. ಭಾಗ್ಯಶ್ರೀ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು. ಮಂಜುಳಾ ಪಂಚಾಳ, ಬೆಂಗಳೂರು ಲಯನಾ, ಆಶಾ ಕಾರ್ಯಕರ್ತೆ ಲಕ್ಷ್ಮಿ, ಸಿಸ್ಟರ್ ಸ್ಟೆಲ ಮರಿಯಾ ಉಪಸ್ಥಿತರಿದ್ದರು. ಕಲಬುರಗಿ ಧರ್ಮ ಪ್ರಾಂತದ ಧರ್ಮಾಧ್ಯಕ್ಷ ಡಾ.ರಾಬರ್ಟ್ ಮೈಕೆಲ್ ಮಿರಾಂದ್ ಸಭೆ ದಿವ್ಯ ಸಾನಿಧ್ಯ ವಹಿಸಿದ್ದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕ ಮಹಿಳೆಯರನ್ನು ಸನ್ಮಾನಿಸಿ, ಪ್ರೋತ್ಸಾಹಿಸಲಾಯಿತು.



ಹುಮನಾಬಾದ್‌ನ ಆರ್ಬಿಟ್ ಸಂಸ್ಥೆಯಲ್ಲಿ ಆಯೋಜಿಸಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸಾಧಕ ಮಹಿಳೆಯರನ್ನು ಸನ್ಮಾನಿಸಿ, ಪ್ರೋತ್ಸಾಹಿಸಲಾಯಿತು.

Kalaburgi Edition


ORBIT
ESTD....1993
ORBIT NGO
Non-Governmental Organization
Humnabad, Karnataka
Organization of Bidar Integral Transformation
Scan this QR Code
TO DONATE
www.orbitbidar.in


SEVA SANGAMA
INCLUDING THE EXCLUDED
SEVA SANGAMA
Organization for Social Concern Development
Scan this QR Code
TO DONATE
www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೆವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.





**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

**Fr. Victor Anil Vas**
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in